ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY DEBATES

ಸೋಮವಾರ 11ನೇ ಆಗಸ್ಟ್ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಗ್ಗೆ 10.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು

ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

1997-98ನೇ ಸಾಲಿನ ಶಿಕ್ಷಣ ಇಲಾಖಾ ಬೇಡಿಕೆಗಳ ಮೇಲೆ ಚರ್ಚೆ (ಮುಂದು)

+ ಡಾ|| ಎಂ.ಪಿ. ಕರ್ಕಿ (ಕುಮಟ) : ಸನ್ಮಾನ್ಯ ಅಧ್ಯಕ್ಷರೆ, ಉನ್ನತ ಶಿಕ್ಷಣ ಇಲಾಖೆಯ ಬೇಡಿಕೆ ಸಂಖ್ಯೆ 11 ಮತ್ತು ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ಇಲಾಖೆಯ ಬೇಡಿಕೆ ಸಂಖ್ಯೆ 14ರ ಮೇಲೆ ನಾನು ಮಾತನಾಡಲು ಇಚ್ಛಿಪಡುತ್ತೇನೆ. ವಿಧಾನ ಮಂಡಲದಲ್ಲಿ ಮಂಡಿಸಿರತಕ್ಕಂಥ ಎಲ್ಲಾ ಬೇಡಿಕೆಗಳ ಪೈಕಿ ಈ ಬೇಡಿಕೆಗಳು ಹೆಚ್ಚಿನ ಮಹತ್ವ ಪಡೆದಿರತಕ್ಕಂಥ ಬೇಡಿಕೆಗಳಾಗಿವೆ. ಮೊದಲನೆಯದಾಗಿ, ಹೇಳುವುದಾದರೆ ಶಿಕ್ಷಣ ಇಲಾಖೆಯಲ್ಲಿ ಸುಮಾರು 2 ಲಕ್ಷದಷ್ಟು ಸಿಬ್ಬಂದಿ ಇದ್ದಾರೆ. ಇದು ರಾಜ್ಯ ಸರ್ಕಾರದ ಸಿಬ್ಬಂದಿಯ ಮೂರನೇ ಒಂದು ಭಾಗದಷ್ಟಾಗುತ್ತದೆ. ನಮ್ಮ ರಾಜ್ಯದ ಒಟ್ಟು ಬಜೆಟ್‌ನಲ್ಲಿ 16.3 ಪರ್‌ಸೆಂಟ್‌ನಷ್ಟು ದೊಡ್ಡ ಪ್ರಮಾಣದ ಹಣವನ್ನು ಈ ಶಿಕ್ಷಣ ಇಲಾಖೆಗೆ ನಿಗದಿ ಮಾಡಲಾಗಿದೆ. ಶಿಕ್ಷಣದ ಮಹತ್ವ ಎಷ್ಟಿದೆ ಎಂಬ ಬಗ್ಗೆ ತಮಗೆಲ್ಲರಿಗೂ ಗೊತ್ತಿರುವುದರಿಂದ ಅದರ ಬಗ್ಗೆ ನಾನು ಹೇಳಬೇಕಾಗಿಲ್ಲ. ರಾಜ್ಯವನ್ನು ಮತ್ತು ರಾಷ್ಟ್ರವನ್ನು ಕಟ್ಟಲಿಕ್ಕೆ ಪ್ರಮುಖ ಪಾತ್ರವನ್ನು ಈ ಶಿಕ್ಷಣ ಇಲಾಖೆವಹಿಸುತ್ತದೆ. ಈ ಶಿಕ್ಷಣ ಇಲಾಖೆಯು ಹಳ್ಳಿಗಾಡಿನಿಂದ ಹಿಡಿದು ಪಟ್ಟಣದವರೆಗೆ ವಿಶಾಲವಾಗಿ ವ್ಯಾಪಿಸಿರತಕ್ಕಂಥ ಒಂದು ಇಲಾಖೆ. ಇಂಥ ಪ್ರಮುಖವಾಗಿರತಕ್ಕಂಥ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಗೆ ಪ್ರಾಮಾಣಿಕವಾಗಿರತಕ್ಕಂಥ ಮತ್ತು ಧಕ್ಷರಾಗಿರತಕ್ಕಂಥ ಮಾನ್ಯ ಗೋವಿಂದೇಗೌಡರು ಮಂತ್ರಿಗಳಾಗಿದ್ದಾರೆ, ಪ್ರಾಮಾಣಿಕರಾದ ಹಾಗೂ ಕಳಕಳಿ ಇರತಕ್ಕಂಥವರು ಶಿಕ್ಷಣ ಇಲಾಖೆಯ ಕಾರ್ಯದರ್ಶಿಗಳಾಗಿದ್ದಾರೆ, ಶಿಕ್ಷಣದ ಬಗ್ಗೆ ಮತ್ತು ಜನತೆ ಬಗ್ಗೆ ಕಳಕಳಿ ಹೊಂದಿರತಕ್ಕಂಥ ಕಮಿಷನರ್‌ರವರು ಹಾಗೂ ಸಿಬ್ಬಂದಿಗಳು ಸೇರಿ ಶಿಕ್ಷಣದ ಮಟ್ಟವನ್ನು ಎತ್ತರಿಸಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಷ್ಟಿದ್ದರೂ ಕೂಡ ಏನೂ ಸಾಲದು ಎನ್ನುವ ವಿಷಯವನ್ನು ಎತ್ತಿಕೊಂಡು ಈ ಸಭೆಯ ಹಾಗೂ ಜನತೆಯ ಲಕ್ಷ್ಯವನ್ನು ಸೆಳೆಯಲಿಕ್ಕೆ ಇಚ್ಛಿಪಡುತ್ತೇನೆ. ಈ ಇಲಾಖೆಯಲ್ಲಿ ಆಗಿರತಕ್ಕಂಥ ಉತ್ತಮ ಕಾರ್ಯಗಳನ್ನು ಹೇಳುವುದಕ್ಕೆ ಬಯಸದೆ ಯಾವ ಯಾವ ನ್ಯೂನತೆಗಳು ಇವೆ, ಹಾಗೂ ಆ ನ್ಯೂನತೆಗಳನ್ನು ಯಾವ ರೀತಿ ಸುಧಾರಿಸಬಹುದೆಂಬ ಬಗ್ಗೆ ಕೆಲವು ಸೂಚನೆಗಳನ್ನು

ಕೊಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ, ಸರ್ಕಾರಿ ಸಿಬ್ಬಂದಿಯಲ್ಲಿ ಪ್ರತಿಶತ 5ರಷ್ಟು ಸಿಬ್ಬಂದಿಗಳನ್ನು ಕಡಿಮೆ ಮಾಡುತ್ತೇವೆಂದು ಘೋಷಣೆ ಮಾಡಿದ್ದರೂ ಆ ಘೋಷಣೆಯ ಧೋರಣೆಯ ವ್ಯತಿರಿಕ್ತವಾದ ರೀತಿಯಲ್ಲಿ ಮಾಡಲಾಗಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮೇಲ್ವಿಚಾರಣೆ ಮಾಡಲು ಎ.ಇ.ಓ., ಮತ್ತು ಬಿ.ಇ.ಓ., ಹುದ್ದೆಗಳನ್ನು ಸೃಷ್ಟಿಸಿದ್ದಾರೆ. ಎ.ಇ.ಓ., ಮತ್ತು ಬಿ.ಇ.ಓ., ಗಳಿಗೆ ಅವರ ಕೆಲಸಗಳೇನೆಂದೇ ಗೊತ್ತಿಲ್ಲ. ಈ ಇಬ್ಬರೂ ಅಧಿಕಾರಿಗಳು ಒಂದೇ ಕೆಲಸವನ್ನು ಮಾಡುವ ರೀತಿ ಈ ಸರ್ಕಾರದಲ್ಲಿ ನಡೆದು ಬಂದಿದೆ. ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಹೊಸದಾಗಿ ಕಮಿಷನರ್ ಹುದ್ದೆಯನ್ನು ಸ್ಥಾಪನೆ ಮಾಡಲಾಗಿದೆ. ಅಲ್ಲಿ ಈಗಾಗಲೇ ಇರುವ ಡೈರೆಕ್ಟರ್‌ರವರು ಸರಿಯಾಗಿ ಇಲ್ಲದೇ ಇದ್ದರೆ ಆ ಸ್ಥಾನದಲ್ಲಿ ಒಬ್ಬ ಐ.ಎ.ಎಸ್. ಆಫೀಸರನ್ನು ತುಂಬಬಹುದಾಗಿತ್ತು. ಆದರೆ, ಆ ರೀತಿ ಮಾಡದೆ ಒಂದು ಕಮಿಷನರ್ ಹುದ್ದೆಯನ್ನೇ ಹೆಚ್ಚುವರಿಯಾಗಿ ಸೃಷ್ಟಿ ಮಾಡಿ ಸರ್ಕಾರದ ಬೊಕ್ಕಸಕ್ಕೆ ಇನ್ನಷ್ಟು ಭಾರವಾಗುವಂಥ ಕೆಲಸವನ್ನು ಮಾಡಲಾಗಿದೆ. ಈಗ ಪಿ.ಯು.ಸಿ., ಬೋರ್ಡ್‌ನಲ್ಲಿ ಜಾಯಿಂಟ್ ಡೈರೆಕ್ಟರ್ ಮತ್ತು ಡೆಪ್ಯೂಟಿ ಡೈರೆಕ್ಟರ್ ಹುದ್ದೆಗಳನ್ನು ಸೃಷ್ಟಿಸಿ ಕೇವಲ ಆ ಹುದ್ದೆಗಳನ್ನು ಅಡ್ಜಸ್ಟ್‌ಮೆಂಟ್‌ಗೆ ತುಂಬಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆಂಬ ವಿಷಯವನ್ನು ಸಭೆಯ ಗಮನಕ್ಕೆ ತರಲಿಕ್ಕೆ ಇಚ್ಛೆಪಡುತ್ತೇನೆ. ಈ ತರಹ ಹೆಚ್ಚುವರಿ ಹುದ್ದೆಗಳು ಎಲ್ಲಾ ಇಲಾಖೆಯಲ್ಲಿ ಪ್ರಾರಂಭವಾಗುವುದು ಹೀಗೆ; ನಂತರ, ಅದಕ್ಕೆ ತಕ್ಕಂತೆ ನಾಲ್ಕನೇ ದರ್ಜೆ ನೌಕರರು, 3ನೇ ದರ್ಜೆ ನೌಕರರು, ಬೆರಳಚ್ಚುಗಾರರು, ಟೆಲಿಫೋನ್, ವಾಹನ ಹೀಗೆ ಎಲ್ಲಾ ಬರುವುದರಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತದೆ. ಈ ರೀತಿ ಮಾಡುವುದು ಸರ್ಕಾರದ ನೀತಿಯ ವಿರುದ್ಧವಾಗಿದೆ. ಈಗ, ಎ.ಇ.ಓ., ಹುದ್ದೆಗಳನ್ನು ರದ್ದು ಮಾಡುತ್ತೇವೆಂದು ಹೇಳಿದ್ದಾರೆ. ಎ.ಇ.ಓ., ಹುದ್ದೆಗಳನ್ನು ರದ್ದು ಮಾಡುವಾಗ ಬಿ.ಇ.ಓ., ಹುದ್ದೆಗಳನ್ನು ಏಕೆ ರದ್ದು ಮಾಡುವುದಿಲ್ಲ? ದೊಡ್ಡ ಎತ್ತರಕ್ಕೆ ಏರಿಸಿದ ಹುದ್ದೆಗಳನ್ನು ಇಟ್ಟುಕೊಂಡು ಕಡಿಮೆ ದರ್ಜೆಯ ಹುದ್ದೆಗಳನ್ನು ಏಕೆ ಕಡಿತ ಮಾಡುತ್ತಾರೆ ಎನ್ನುವ ವಿಷಯ ನನಗೆ ಸಂದಿಗ್ಧಕ್ಕೆ ಎಡೆಮಾಡಿಕೊಟ್ಟಿದೆ. ಕಳೆದ ಸಾಲಿನಲ್ಲಿ ಅನೇಕ ವಿಷಯಗಳಲ್ಲಿ ಸರ್ಕಾರದವರು ಸೋತಿದ್ದಾರೆ. ಕೆಲವು ವಿಷಯಗಳಲ್ಲಿ ನಿಗದಿತ ಹಣಕ್ಕಿಂತ ಕಮ್ಮಿ ಹಣವನ್ನು ಖರ್ಚು ಮಾಡಿದ್ದಾರೆ. ಪುಸ್ತಕಾಲಯ ಯೋಜನೆಯಲ್ಲಿ ಪ್ರತಿಶತ ಕೇವಲ 13.33 ಮಾತ್ರ ಗುರಿಯನ್ನು ಸಾಧಿಸಲು ಸಾಧ್ಯವಾಗಿದೆ. ಅದೇ ರೀತಿ ಆಹಾರ ಯೋಜನೆಯಲ್ಲಿ ಪ್ರತಿ ಶತ ಕೇವಲ 64 ರಷ್ಟು ಮಾತ್ರ ಸಾಧನೆ ಮಾಡಲಿಕ್ಕೆ ಸಾಧ್ಯವಾಗಿದೆ. ಇವರು, ಅಲ್ಪಸಂಖ್ಯಾತರ ಹಿತ ರಕ್ಷಕರೆಂದು ಹೇಳಿಕೊಳ್ಳುತ್ತಾರೆ. ಆದರೆ, ಮುಸ್ಲಿಮ್, ಅಲ್ಪಸಂಖ್ಯಾತರ ಶಾಲೆಗಳಿಗೆ ಇಟ್ಟಿದ್ದ ಹಣದಲ್ಲಿ ಕೇವಲ 26.60 ರಷ್ಟನ್ನು ಮಾತ್ರ ಖರ್ಚು ಮಾಡಿದ್ದಾರೆ. ಸಂಸ್ಕೃತ ಅಧ್ಯಯನ ಮಾಡುವ ಶಿಕ್ಷಕರುಗಳಿಗೆ ವೇತನ ನೀಡಲು ನಿಗದಿ ಮಾಡಿದ್ದ ಒಂದು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲೇ ಇಲ್ಲ. ಸೆಕೆಂಡರಿ ಶಾಲೆಗಳಲ್ಲಿ ಸಂಸ್ಕೃತ ಬೋಧನೆ ಸಲುವಾಗಿ ಸೌಕರ್ಯ ಒದಗಿಸುವ ಸಲುವಾಗಿ ಇಟ್ಟಿದ್ದ ಒಂದು ಲಕ್ಷ ರೂಪಾಯಿಗಳಲ್ಲಿ 61 ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ಪಂಗಡದ ಪ್ರತಿಭಾನ್ವಿತ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕೆ ನಿಗದಿ ಮಾಡಲಾಗಿದ್ದ 10 ಲಕ್ಷ ರೂಪಾಯಿಗಳಲ್ಲಿ ಒಂದು ಪೈಸೆಯನ್ನೂ ಖರ್ಚುಮಾಡಿಲ್ಲ. ಅದೇರೀತಿಯಲ್ಲಿ ಧೈರ್ಯ, ಪರಾಕ್ರಮಶಾಲಿಯಾದ ಮಕ್ಕಳ ಶಿಕ್ಷಣದ

ವೆಚ್ಚವನ್ನು ಕೊಡುತ್ತೇವೆಂದು ಸ್ವಲ್ಪ ಹಣವನ್ನು ಇಟ್ಟಿದ್ದರು. ಆ ವಿದ್ಯಾರ್ಥಿಗಳಿಗೆ ಎಷ್ಟು ತಡಕಾಡಿದರೂ ಕೂಡ ವಿಶ್ವವಿದ್ಯಾನಿಲಯಕ್ಕೆ ಸರಕಾರದವರಲ್ಲಿ ಎಷ್ಟು ಕೇಳಿಕೊಂಡರೂ ಕೂಡ ಒಂದು ಪೈಸೆಯನ್ನೂ ಕೂಡ ಅವರಿಗೆ ಕೊಡದೆ ಅವರ ತಂದೆ-ತಾಯಿಗಳಿಗೆ ಬಹಳ ಅಸಮಾಧಾನವನ್ನು ಉಂಟು ಮಾಡಿದ್ದಾರೆ. ಅದೇ ರೀತಿಯಲ್ಲಿ ಸಂಸ್ಕೃತ ವಿಷಯದಲ್ಲಿ ಎಸ್‌ಎಸ್‌ಎಲ್‌ಸಿ ಮಟ್ಟದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳತಕ್ಕಂಥವರು 13407. ಇದು ಎಸ್‌ಎಸ್‌ಎಲ್‌ಸಿ ಟಿಸಿಹೆಚ್ ಆದನಂತರ ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷೆಗೆ ಕುಳಿತುಕೊಳ್ಳತಕ್ಕಂಥ ವಿದ್ಯಾರ್ಥಿಗಳ ಸಂಖ್ಯೆ.

ಅಧ್ಯಕ್ಷರು : ಡಾ|| ಕರ್ಕಿಯವರೇ, ನಾವು ನಿಮ್ಮಿಂದ ಏನು ನಿರೀಕ್ಷೆ ಮಾಡುತ್ತೇವೆ ಅಂದರೆ, ಶಿಕ್ಷಣ ಇಲಾಖೆಯ ಬೇಡಿಕೆಯ ಮೇಲೆ ನೀವು ಮಾತನಾಡುವಾಗ, ಇರುವ ಅಂಕಿಸಂಖ್ಯೆಗಳನ್ನು ನೀವು ಹೇಳಿಯೇ ಹೇಳುತ್ತೀರಿ. ಮೂಲಭೂತವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಆಗಬೇಕಾಗಿರತಕ್ಕಂಥ ಬದಲಾವಣೆಗಳು. ಅದರಲ್ಲಿಯೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣ. ಎಲ್ಲಿ ಅದು ಹೆಪ್ಪುಗಟ್ಟಿದೆ? ಹೇಗೆ ನಾವು ಹೊಸ ಚಾಲನೆಯನ್ನು ಕೊಡಬಹುದು ಎಂಬ ಬಗ್ಗೆ ಹೇಳಿ. ನಿಮಗೆ ಆ ಶಕ್ತಿ ಇದೆ. ನೀವು ಆ ವಿಚಾರದಲ್ಲಿ ಏನಾದರೂ ಮಾತನಾಡುವುದಾದರೆ ಈ ಸಭೆಯು ನಿಮಗೆ ಧನ್ಯವಾದಗಳನ್ನು ಅರ್ಪಿಸುತ್ತದೆ.

ಡಾ|| ಎಂ.ಪಿ. ಕರ್ಕಿ : ಅದರ ಬಗ್ಗೆಯೂ ಕೂಡ ಮಾತನಾಡುತ್ತೇನೆ. ನಾನು ಮಾತನಾಡುವಾಗ ಸರಕಾರದ ವೈಫಲ್ಯಗಳನ್ನು ಕೂಡ ಎತ್ತಿ ತೋರಿಸಬೇಕಲ್ಲಾ? ಅದಕ್ಕಾಗಿ ಆ ಮಾತುಗಳನ್ನು ಆಡಿದ್ದೇನೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯರು ಮಾತನಾಡುವಾಗ ಪ್ರಾರಂಭದಲ್ಲಿಯೇ ನಾನು ವಿರೋಧ ಪಕ್ಷದಲ್ಲಿರುವುದರಿಂದ ವಿರೋಧದ ಬಗ್ಗೆ ನಾನು ಕೆಲವು ವಿಷಯಗಳನ್ನು ಪ್ರಸ್ತಾವನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರು ನಮ್ಮ ಇಲಾಖೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿದ್ದಾರೆ. ಇಲಾಖೆಯು ಚೆನ್ನಾಗಿ ಕೆಲಸ ಮಾಡುತ್ತಾ ಇದೆ ಎನ್ನುವ ಬಗ್ಗೆ ಅವರ ಮನಸ್ಸಿನಲ್ಲಿ ತೃಪ್ತಿ ಇದೆ. ಆದರೆ ಕೆಲವು ವಿಷಯಗಳನ್ನು ನಾನು ವಿರೋಧ ಪಕ್ಷದಲ್ಲಿದ್ದು ಹೇಳದಿದ್ದರೆ ಅದು ಸರಿ ಅಲ್ಲ ಎಂದು ಆ ಭಾವನೆಯಿಂದ ಹೇಳುತ್ತಾ ಇದ್ದಾರೆ. ಅವರ ಮಾತುಗಳು ನಮಗೆ ಸಂತೋಷ ತರುತ್ತವೆ.

ಡಾ|| ಎಂ.ಪಿ.ಕರ್ಕಿ : ಮಾನ್ಯ ಗೋವಿಂದೇಗೌಡರವರಂಥ ಒಳ್ಳೆಯ ಜನ ಮತ್ತು ಕಾರ್ಯ ತತ್ಪರರು ಮತ್ತು ಒಳ್ಳೆಯ ಅಧಿಕಾರಿಗಳು ಇರುವಂಥ ಈ ಒಂದು ಇಲಾಖೆಯು ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿತ್ತು. ಆ ಕೆಲಸವನ್ನು ಅವರು ಮಾಡಿಲ್ಲ. ಅದಕ್ಕಾಗಿ ನಾನು ಈ ಬೇಡಿಕೆಯನ್ನು ವಿರೋಧಿಸಿ ಮಾತನಾಡುತ್ತಾ ಇದ್ದೇನೆ. ಮಾನ್ಯ ಅಧ್ಯಕ್ಷರೇ, ಒಂದು ವಿಷಯವನ್ನು ಪ್ರಾಥಮಿಕ ಶಿಕ್ಷಣದ ವಿಷಯದಲ್ಲಿ ಮಾತನಾಡಲು ಇಷ್ಟಪಡುತ್ತೇನೆ. ವರ್ಗಾವಣೆಯ ವಿಚಾರದಲ್ಲಿ ಒಂದು ನೀತಿಯನ್ನು ಕಳೆದ ವರ್ಷ ತೆಗೆದುಕೊಂಡರು. ಯಾವುದೂ ವರ್ಗಾವಣೆ ಇಲ್ಲ ಎಂದು ಹೇಳಿದರು. ಈ ಒಂದು ಹಠಮಾರಿತನ ಬೇಕೇ ಎಂಬುದನ್ನು ನಾನು ಕೇಳಲಿಚ್ಛಿಸುತ್ತೇನೆ. ಶಿಕ್ಷಕರು ಒಳ್ಳೆಯ ಕೆಲಸ ಮಾಡಬೇಕಾದರೆ ವರ್ಗಾವಣೆಯೂ ಕೂಡ ಅವಶ್ಯಕ. ಕೆಲವೊಮ್ಮೆ ಅವರ ಅನುಕೂಲತೆಗಾಗಿ ಕೆಲವೊಂದು ಸರಿಯಾಗಿರದ ಶಿಕ್ಷಕರನ್ನು ಪನಿಶ್‌ಮೆಂಟ್ ಮಾಡುವ ಸಲುವಾಗಿ ವರ್ಗಾವಣೆ ಮಾಡುವ ಅವಶ್ಯಕತೆ ಇದೆ. ಹಾಗೆ ಯಾವುದೇ ವರ್ಗಾವಣೆ ಮಾಡುವುದಿಲ್ಲ ಎಂದು ಹಠ ಹಿಡಿದರು. ಈ ವರ್ಷ ವರ್ಗಾವಣೆ

ಮಾಡಿದರು. ಅದರ ಮೂಲಕ ಯಾವರೀತಿಯಲ್ಲಿ ಗೊಂದಲ ಸೃಷ್ಟಿ ಮಾಡಿದರು? ಈ ಕುರಿತು ದೂರದೃಷ್ಟಿತ್ವ ಇಲ್ಲವೇ ಇಲ್ಲ. ಎಲ್ಲಾ ಕಮಿಷನರ್ ಆಫೀಸ್‌ಗೆ ಬರಲೇಬೇಕು. ಕಮಿಶನರ್ ಆಫೀಸ್‌ನಿಂದ ತಿರುಗಿ ವರ್ಗಾವಣೆಯ ಆರ್ಡರ್‌ರನ್ನು ಕೊಡಬೇಕು. ಆದರೆ ಕೊಟ್ಟಿರತಕ್ಕಂಥ ಸಮಯ ಎಷ್ಟು? ಬಂದಿರತಕ್ಕಂಥ ಅರ್ಜಿಗಳು 28 ಸಾವಿರ. 28 ಸಾವಿರ ಅರ್ಜಿಗಳನ್ನು ಪರಿಷ್ಕರಿಸಿ, ನೋಡಿ ಅವುಗಳನ್ನು ಬೇಕಾದ ರೀತಿಯಲ್ಲಿ ಮಾಡಲಿಕ್ಕೆ ಕಮಿಶನರ್ ಹತ್ತಿರ ಸಾಕಷ್ಟು ಸಿಬ್ಬಂದಿ ಇದೆಯೇ ಎಂಬುದನ್ನು ನೋಡಬೇಕು. ಆದರೂ ಮಾಡಿದರು. ಅದು ಫೇಲ್ಯೂರ್ ಆಯಿತು. ಅನಂತರ ತಿರುಗಿ ಅದನ್ನು ಡಿಡಿಪಿಐಗೆ ಕೊಟ್ಟರು. ಈ ಡಿಡಿಪಿಐಯವರಿಗೆ ಕೊಟ್ಟಾಗ ಏನಾಯಿತು? ಎಲ್ಲಿ ವರ್ಗಾವಣೆ ಆಗಬೇಕಾಗಿತ್ತು, ಅಲ್ಲಿ ವರ್ಗಾವಣೆಯಾಗಲಿಲ್ಲ. ಎಲ್ಲಿ ವರ್ಗಾವಣೆ ಬೇಡವೋ ಅಲ್ಲಿ ವರ್ಗಾವಣೆಯಾಯಿತು. ಈ ವರ್ಗಾವಣೆಗಳಿಗೆ ಕೆಲವೊಂದು ಕಂಡೀಶನ್ಸ್ ಹಾಕಿದರು. ಜೋಡಿಕೂಡಿಸತಕ್ಕಂಥಾದ್ದು, ಪರಸ್ಪರ ವರ್ಗಾವಣೆ, ಶರೀರದ ಆಸ್ತಿತ್ವದ ವರ್ಗಾವಣೆ. ಈ ಮೂರು ಕೂಡ ಸರಿಯಾಗಿರತಕ್ಕಂಥಾದ್ದೇ. ಆದರೆ ಈ ಜೋಡಿ ಕೂಡಿಸತಕ್ಕಂಥ ವರ್ಗಾವಣೆಗೆ ಮೂರು ವರ್ಷಗಳ ಮಿತಿ ಹಾಕಿದರೋ ಏನೋ ಗೊತ್ತಿಲ್ಲ, ಕೆಲವರು ಹಾಕಿದ್ದಾರೆ ಎಂದು ಹೇಳಿದರು. ಹೀಗೆ ಈ ಜೋಡಿ ಕೂಡಿಸತಕ್ಕಂಥ ವರ್ಗಾವಣೆಗೆ, ಪರಸ್ಪರ ವರ್ಗಾವಣೆಗೆ ಈ ಒಂದು ಕಾಲಮಿತಿಯನ್ನು ಹಾಕತಕ್ಕಂಥ ಅವಶ್ಯಕತೆ ಇದೆಯೇ? ಅದಲ್ಲದೆ ಒಂದು ಬೈಪಾಸ್ ಎಂದು ಇಟ್ಟುಕೊಂಡರು. ಅದು ಏನು? ಮುಖ್ಯಮಂತ್ರಿಗಳ ಪರಮಾನಿಗೆಯಿಂದ ಮಾಡಬಹುದು ಎಂದು ಮಾಡಿದರು. ಈ ಎಲ್ಲಾ ಶಿಕ್ಷಕರುಗಳ ಬೇಡಿಕೆ ಮತ್ತು ಕೇಳಿಕೆಗಳನ್ನು ಮನ್ನಿಸಿ ಜೋಡಿಕೂಡಿಸತಕ್ಕಂಥ ಎಲ್ಲಾ ವರ್ಗಾವಣೆಗಳನ್ನು ಮಾಡಲು ಏನು ತೊಂದರೆಯಿತ್ತು ಸರಕಾರಕ್ಕೆ? ಸರಕಾರದ ಬೊಕ್ಕಸಕ್ಕೆ ಇದರಿಂದ ನಷ್ಟವಿರಲಿಲ್ಲ. ಸರಕಾರಕ್ಕೆ ಅವರಿಗೆ ಟಿಎ ಡಿಎ ಕೊಡತಕ್ಕಂಥ ಅವಶ್ಯಕತೆ ಇರಲಿಲ್ಲ. ಇದು ಕೋರಿಕೆಯ ವರ್ಗಾವಣೆಯಾಗಿತ್ತು. ಅಲ್ಲದೆ ಶಿಕ್ಷಕರಲ್ಲಿ ಒಂದು ರೀತಿಯ ಸಮಾಧಾನ ವ್ಯಾಪಿಸುತ್ತಿತ್ತು. ಅದು ಸರಕಾರದ ನೀತಿಯೂ ಕೂಡ ಆಗಿದೆ. ದಂಪತಿಗಳನ್ನು ಕೂಡಿಸತಕ್ಕಂಥಾದ್ದು ಸರಕಾರದ ನೀತಿ ಕೂಡ. ಈ ನೀತಿಗನುಗುಣವಾಗಿ ಜೋಡಿಕೂಡಿಸತಕ್ಕಂಥ ದಂಪತಿಗಳನ್ನು ಕೂಡಿಸತಕ್ಕಂಥ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಮಾಡಿದ್ದರೆ ಕಲಿಸತಕ್ಕಂಥ ಶಿಕ್ಷಕರಲ್ಲಿ ಒಂದು ರೀತಿಯ ಸಮಾಧಾನವಿರುತ್ತಿತ್ತು. ಅದನ್ನು ಮಾಡಲಿಲ್ಲ. ಇದು ದೂರದೃಷ್ಟಿತ್ವ ಇಲ್ಲದಿರತಕ್ಕಂಥ ವರ್ತನೆ. ಮೊದಲು ಏನೋ ಹೇಳಿದರು, ಆ ಮೇಲೆ ಮತ್ತೊಂದು ಮಾಡಿದರು. ಇದರಿಂದ ಏನೂ ಸಾಧನೆಯಾಗಲಿಲ್ಲ. ಇನ್ನೂ ಕೂಡ ಶಿಕ್ಷಕರಲ್ಲಿ ಸಮಾಜದಲ್ಲಿರತಕ್ಕಂಥ ಜನರಿಗೆ ವರ್ಗಾವಣೆ ವಿಷಯದಲ್ಲಿ ವಿಶ್ವಾಸವಿಲ್ಲ. ವರ್ಗಾವಣೆ ಸರಿಯಾಗಿ ಆಗುತ್ತದೆ ಎಂಬ ಭಾವನೆಯೂ ಇಲ್ಲ. ಆ ರೀತಿಯಾಗಿರತಕ್ಕಂಥ ಭಾವನೆಯನ್ನು ಜನರಲ್ಲಿ ತಂದುಕೊಟ್ಟಿರತಕ್ಕಂಥಾದ್ದು ನಮ್ಮ ಮಾನ್ಯ ಗೋವಿಂದೇಗೌಡರಿಂದ ಆಗಬಾರದಿತ್ತು. ಅದೊಂದು ಮಾಡಿದ್ದರೆ, ಈ ವರ್ಷ ಮುಗಿಸಿದ್ದರೆ ಬಹುತೇಕ ಮುಂದಿನ ವರ್ಷಗಳಲ್ಲಿ ಯಾವ ವರ್ಗಾವಣೆ ಅವಶ್ಯಕತೆ ಇದೆಯೋ ಅವುಗಳನ್ನು ಮಾಡಬಹುದಾಗಿತ್ತು. ನಾವು ನೋಡುತ್ತಾ ಇದ್ದೇವೆ. ಪಟ್ಟಣಗಳಲ್ಲಿ ಎಷ್ಟು ಶಿಕ್ಷಕರು ಬೇಕೋ ಅದಕ್ಕಿಂತ ಹೆಚ್ಚು ಶಿಕ್ಷಕರಿದ್ದಾರೆ. 6 ಶಿಕ್ಷಕರು ಬೇಕಾಗಿರುವಲ್ಲಿ 12 ಜನರಿರುತ್ತಾರೆ. ಹಳ್ಳಿಗಳಲ್ಲಿ 6 ಜನರು ಬೇಕಾಗಿರುವಲ್ಲಿ 3 ಜನರು ಇರುತ್ತಾರೆ. ನಾವು ನೋಡಿದ್ದೇವೆ,

ಒಂದು ಸ್ಥಳದಲ್ಲಿ ನೇಮಕಾತಿಯಾದರೆ ರಿಟೈರ್ಡ್ ಆಗುವ ತನಕವೂ ಆರು ಕಿಲೋಮೀಟರ್ ವಿಸ್ತೀರ್ಣದಲ್ಲಿಯೇ ಅವರು ಇರುತ್ತಾರೆ. ಬೇರೆ ಶಾಲೆಗೆ ಹೋಗುವುದಿಲ್ಲ. ಇಲ್ಲಿಂದ ಅಲ್ಲಿಗೆ ಹೋಗಕೂಡದು, ಅಲ್ಲಿಂದ ಇಲ್ಲಿಗೆ ಹೋಗಕೂಡದು. ಈ ಒಂದು ಶಿಕ್ಷಣದ ಉನ್ನತಿಗೆ ಕಾರಣವಾಗಿರತಕ್ಕಂಥ ಪ್ರಾಥಮಿಕ ಅವಶ್ಯಕತೆ ಇದು. ಅದನ್ನು ಮಾಡಬಹುದಾಗಿತ್ತು. 22 ವರ್ಷಗಳಷ್ಟು ಕಾಲ ಯಾವುದೇ ರಸ್ತೆ ಸೌಲಭ್ಯಗಳು ಇಲ್ಲದಿರತಕ್ಕಂಥ ಶಾಲೆಗಳಲ್ಲಿ ಕೆಲಸ ಮಾಡುತ್ತಿರತಕ್ಕಂಥ ಶಿಕ್ಷಕರುಗಳಿದ್ದಾರೆ. ಅದೇ ರೀತಿಯಲ್ಲಿ ನಿವೃತ್ತರಾಗುವವರೆಗೂ ಪಟ್ಟಣಗಳಲ್ಲಿಯೇ ಕೆಲಸ ಮಾಡುತ್ತಿರತಕ್ಕಂಥ ಶಿಕ್ಷಕರುಗಳೂ ಇದ್ದಾರೆ. ಇದನ್ನು ಸರಿ ಮಾಡದೇ ಹೋದರೆ ಶಿಕ್ಷಕರಲ್ಲಿ ನಾವು ಶಿಕ್ಷಣ ಕೊಡಬೇಕು ಎನ್ನತಕ್ಕಂಥ ಮನಸ್ಸು ಸಾಧ್ಯವಾಗಲಿಕ್ಕಿಲ್ಲವೋ ಏನೋ ಎನ್ನುವಂಥ ಭಾವನೆ ನನಗಿದೆ. ವರ್ಗಾವಣೆಗಳನ್ನು ಮಾಡುವಾಗ ಕೆಲವೊಂದು ಸೂತ್ರಗಳನ್ನು ಅನುಸರಿಸಬೇಕೆಂಬುದು ನನ್ನ ಭಾವನೆ. ಒಂದು ಹೊಸ ನಿಯಮಗಳನ್ನು ಮಾಡಬೇಕು. ಆ ನಿಯಮಗಳ ಪ್ರಕಾರ ಹೊಸದಾಗಿ ಯಾರನ್ನು ನೇಮಕಾತಿ ಮಾಡಿದ್ದೇವೋ, ಅವರನ್ನು ಈಗ ಹಳ್ಳಿಗಾಡಿಗೆ ಹಾಕುತ್ತಾ ಇದ್ದೀರಿ, ದೂರ ಹಾಕುತ್ತಾ ಇದ್ದೀರಿ. ಮಹಿಳೆಯರನ್ನು ನೇಮಕ ಮಾಡಿದ್ದರೆ ಅವರಿಗೆ ರಸ್ತೆ ಸಮೀಪದ ಶಾಲೆಗಳಲ್ಲಿ ಆಸ್ಪದ ಕೊಡಿ. ನಮ್ಮಲ್ಲಿ ಅನೇಕರು ಇದ್ದಾರೆ. ಮಳೆಗಾಲದಲ್ಲಿಯೂ ಸುಮಾರು 14 ಕಿ.ಮೀ. ದೂರ ನಡೆದುಕೊಂಡು ಹೋಗ ಬೇಕಾಗಿರತಕ್ಕಂಥ ಅಡವಿಯಲ್ಲಿ ಏಕಾಂಗಿಯಾಗಿ ನಡೆದುಕೊಂಡು ಹೋಗತಕ್ಕಂಥ ಸ್ತ್ರೀ ಶಿಕ್ಷಕರು ಇದ್ದಾರೆ. ಇಂಥ ಅವಸ್ಥೆ ಅವರಿಗೆ ಬರಬಾರದು. ಅದಕ್ಕಾಗಿ ಸೂಕ್ತ ವ್ಯವಸ್ಥೆ ಮಾಡಬೇಕಾಗುತ್ತದೆ. ಯಾರು ಹತ್ತು ವರ್ಷಕ್ಕಿಂತ ಹೆಚ್ಚಿಗೆ ಒಂದೇ ಸ್ಥಾನದಲ್ಲಿದ್ದಾರೋ ಅಂಥವರಿಗೆ 40-50 ಕಿ.ಮೀ. ದೂರಕ್ಕೆ ಹಾಕಿ. ಅಲ್ಲಿಯೇ ಸಮೀಪದ ಶಾಲೆಗೆ ನೀವು ಹಾಕಿದರೆ ಅದೇ ಶಾಲೆಗೆ ತಿರುಗಿ ಅವರು ಬರುತ್ತಾರೆ. ಆದ್ದರಿಂದ 40-50 ಕಿ.ಮೀ. ದೂರ ಹಾಕಿ ಅವನು ಪುನಃ ಅಲ್ಲಿಗೆ ಬರಲಾರದಂಥ ಸ್ಥಿತಿಯನ್ನು ನಿರ್ಮಾಣ ಮಾಡಬೇಕು. ಹಾಗೆಯೇ ಯಾರು ಹಿರಿಯರು ಇದ್ದಾರೋ ಅವರ ಮಕ್ಕಳು ಶಾಲಾ ಕಾಲೇಜುಗಳಿಗೆ ಹೋಗುತ್ತಾ ಇರುತ್ತಾರೆ. ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡುವುದಕ್ಕೋಸ್ಕರ ದೂರದಿಂದ ಪಟ್ಟಣದ ಹತ್ತಿರ ತರುವ ಅವಶ್ಯಕತೆ ಬಹಳಷ್ಟು ಇರುತ್ತದೆ. ಹೀಗೆ ಅನೇಕ ರೀತಿಯ ಒಂದು ಕಟ್ಟುಪಾಡುಗಳನ್ನು ಹಾಕಿಕೊಂಡರೆ ಬಹುತೇಕವಾಗಿ ನಾವು ಈ ಒಂದು ಟ್ರಾನ್ಸ್‌ಫರ್‌ನ್ನು ಸರಿಯಾದ ರೀತಿಯಲ್ಲಿ ಮತ್ತು ಶಿಕ್ಷಣಕ್ಕೆ ಪೂರಕವಾದ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ ಎಂಬುದನ್ನು ನಾನಿಲ್ಲಿ ಹೇಳಲು ಇಷ್ಟಪಡುತ್ತೇನೆ. ಒಂದು ರೀತಿಯಲ್ಲಿ ಬಿಎಡ್ ಮತ್ತು ಟಿಸಿಹೆಚ್ ಕಾಲೇಜುಗಳಿಗೆ ಸೇರತಕ್ಕಂಥ ವಿದ್ಯಾರ್ಥಿಗಳಿಗೆ ಇಡೀ ರಾಜ್ಯವನ್ನು ಹಾಕಿಕೊಂಡಿದ್ದಾರೆ. ಉದಾಹರಣೆಗಾಗಿ ಬೀದರ್‌ನವರು ಕೋಲಾರಕ್ಕೆ ಹೋಗಬಹುದು, ಬೆಂಗಳೂರಿನ ವಿದ್ಯಾರ್ಥಿ ಮಂಗಳೂರಿಗೆ ಹೋಗಬಹುದು, ಮಂಗಳೂರಿನ ವಿದ್ಯಾರ್ಥಿ ಬಿಜಾಪುರಕ್ಕೆ ಹೋಗಬಹುದು. ಇದು ಬಿಎಡ್ ಕಾಲೇಜುಗಳಿಗೂ ಅನ್ವಯವಾಗುತ್ತದೆ. ಆದರೆ ತಾವು ಏನು ಮಾಡಿದ್ದೀರಿ ಉದ್ಯೋಗಕ್ಕೆ ತೆಗೆದುಕೊಳ್ಳ ಬೇಕಾದರೆ ಅದನ್ನು ಏಕೆ ಕ್ಷೀಣವಾಗಿಸಿದ್ದೀರಿ? ಉದಾಹರಣಾರ್ಥವಾಗಿ ಪ್ರೈಮರಿ ಶಿಕ್ಷಕರನ್ನು ತೆಗೆದುಕೊಳ್ಳಬೇಕಾದರೆ ಒಂದು ಜಿಲ್ಲೆ, ಸೆಕೆಂಡರಿ ಶಿಕ್ಷಕರನ್ನು ತೆಗೆದು ಕೊಳ್ಳಬೇಕಾದರೆ ಒಂದು ಡಿವಿಜನ್, ಇದು ಹೀಗೇಕೆ? ನೀವು ಅಡ್ಮಿಶನ್‌ಗೆ ಇಡೀ ರಾಜ್ಯವನ್ನು ಒಂದು ಘಟಕವನ್ನಾಗಿ ತೆಗೆದುಕೊಳ್ಳುತ್ತೀರಿ. ಉದ್ಯೋಗಾವಕಾಶ ಕೊಡಬೇಕಾದರೆ

ಪ್ರಾಥಮಿಕ ಶಿಕ್ಷಣಕ್ಕೆ ಜಿಲ್ಲೆ, ಸೆಕೆಂಡರಿ ಶಿಕ್ಷಣಕ್ಕೆ ಡಿವಿಜನ್ ಎಂದು ಏಕೆ ಮಾಡಿದ್ದೀರಿ? ಅದಕ್ಕೂ ಇಡೀ ರಾಜ್ಯವನ್ನಾಗಿ ಏಕೆ ಮಾಡಬಾರದು? ಅದರಿಂದಾಗಿ ಯಾರು ಹೆಚ್ಚಿನ ಗುಣವನ್ನು ತೆಗೆದುಕೊಂಡಿರುತ್ತಾರೆ, ಒಳ್ಳೆಯ ಶಿಕ್ಷಕರ ಅನುಕೂಲ ಇಡೀ ರಾಜ್ಯಕ್ಕೆ ಆಗತಕ್ಕಂಥ ಒಂದು ಪರಿಸ್ಥಿತಿ ಉದ್ಭವವಾಗುತ್ತದೆ. ಇಲ್ಲದೇ ಹೋದರೆ ಮಂಗಳೂರಿನಲ್ಲಿ 74 ಪರ್‌ಸೆಂಟ್ ತೆಗೆದುಕೊಳ್ಳುವವರು ಕಡೆಗಾಗುತ್ತಾರೆ, ಕೋಲಾರ ಜಿಲ್ಲೆಯಲ್ಲಿ 55 ಪರ್‌ಸೆಂಟ್ ತೆಗೆದುಕೊಂಡವರು ಕಡೆಗಾಗುತ್ತಾರೆ. ಶಿಕ್ಷಣ ಬೆಳೆಯಬೇಕಾದರೆ ಈ ಒಂದು ಉದ್ಯೋಗ ತೆಗೆದುಕೊಳ್ಳಬೇಕಾದರೆ, ಇಡೀ ರಾಜ್ಯವನ್ನೇ ಒಂದು ಕ್ಷೇತ್ರವಾಗಿ ತೆಗೆದುಕೊಂಡರೆ ಒಳ್ಳೆಯದೆಂದು ಹೇಳತಕ್ಕಂಥ ವಿಷಯವನ್ನು ಅವರ ಗಮನಕ್ಕೆ ತರುತ್ತಿದ್ದೇನೆ. ಈ ಸ್ಟೇಟ್ ಅವಾರ್ಡ್ಸ್ ಶಿಕ್ಷಕರಿಗೆ ಏನು ಕೊಡುತ್ತಾರೆ, ಈ ಸ್ಟೇಟ್ ಅವಾರ್ಡ್ಸ್‌ನ ಅವಶ್ಯಕತೆ ಇದೆಯೇ? ಏಕೆಂದರೆ ಮೊದಲು ಬಹಳ ಚೆನ್ನಾಗಿ ಇತ್ತು. ಪ್ರಾರಂಭದಲ್ಲಿ ಈ ಸ್ಟೇಟ್ ಅವಾರ್ಡ್ಸ್ ಯಾರು ಉತ್ತಮವಾಗಿ ಶಿಕ್ಷಣ ಕಲಿಸುತ್ತಿದ್ದರೋ ಅವರಿಗೆ ಸಿಗುತ್ತಾ ಇತ್ತು. ಈಗ ಏನಾಗಿದೆ. ಯಾರು ಇಡೀ ದಿನ ರಾಜಕೀಯ ಮಾಡಿ ಶಾಲೆಗೆ ಹೋಗುವುದಿಲ್ಲವೋ ಯಾರು ಈ ವಿಧಾನಸೌಧದ ಮೂರನೆ ಮಹಡಿಯಲ್ಲಿ ತಿರುಗಾಡುತ್ತಾರೋ, ಯಾರು ಇಲ್ಲಿ ಶಾಸಕರ ಜೊತೆ ಸುತ್ತಾಡಿ ಯಾರು ರೆಕ್‌ಮೆಂಡ್ ಮಾಡಿಕೊಂಡು ಬರುತ್ತಾರೋ ಅವರಿಗೆ ನಾವು ಉತ್ತಮ ಶಿಕ್ಷಕ ಆವಾರ್ಡ್ ಕೊಡುತ್ತೇವೆ. ಹೀಗೆ ನಾವು ಯಾಕೆ ಉತ್ತಮ ಶಿಕ್ಷಕರು ಆಗಬಾರದು ಎನ್ನತಕ್ಕಂಥ ಭಾವನೆ ಅವರಲ್ಲಿ ಬರುತ್ತದೆ. ಎಲ್ಲಾ ಶಿಕ್ಷಕರು ಬಂದರೂ ಶಿಕ್ಷಣ ಯಾವ ಮಟ್ಟಕ್ಕೆ ಹೋಗುತ್ತದೆ ಎನ್ನುವ ಕಲ್ಪನೆ ನಾವು ಮಾಡಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಈ ಉತ್ತಮ ಶಿಕ್ಷಕ ಪ್ರಶಸ್ತಿ ಕೊಡುವುದು ಕೈಬಿಡಬೇಕೆಂದು ನನಗೆ ಅನಿಸುತ್ತದೆ. ಇಲ್ಲದೆ ಹೋದರೆ ತಮ್ಮ ಹತ್ತಿರ ಸಾಧ್ಯವಿದ್ದರೆ ಯಾವುದು ತಮ್ಮ ಇಲಾಖೆಯಿಂದ ಪ್ರಾಮಾಣಿಕವಾಗಿ ರೆಕ್‌ಮೆಂಡ್‌ಆಗಿರುತ್ತದೆಯೋ ಅಂತಹ ಶಿಕ್ಷಕರಿಗೆ ಕೊಡಿ. ನಾನು ಮೊನ್ನೆ ಒಂದು ಹಳ್ಳಿಗೆ ಹೋಗಿದ್ದೆ ಆ ಶಿಕ್ಷಕ ನಿವೃತ್ತರಾಗಿ ನಾಲ್ಕು ತಿಂಗಳು ಆಗಿತ್ತು. ಆ ಊರಿನ ಜನ ಕೂಡಿ ಅವರಿಗೆ ಸನ್ಮಾನ ಮಾಡಿದರು. ಬಂಗಾರದ ಚೈನ್ ಹಾಗೂ ಒಂದು ಉಂಗುರವನ್ನು ಕೊಟ್ಟರು. ಅವರು ಉತ್ತಮ ಶಿಕ್ಷಕರಾಗಿ ಅವಾರ್ಡ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೆ ಒಂದು ಅಪ್ಲಿಕೇಷನ್ ಹಾಕಬೇಕು. ನಾನು ಉತ್ತಮ ಶಿಕ್ಷಕ, ಅದಕ್ಕೆ ನನಗೆ ಒಂದು ಅವಾರ್ಡ್ ಕೊಡಿ ಎಂದು ಹೇಳಿ ಒಂದು ಅಪ್ಲಿಕೇಷನ್ ಹಾಕಬೇಕಾಗುತ್ತದೆ. ಅದಕ್ಕೆ ಶಾಸಕರ ಒಂದು ಸರ್ಟಿಫಿಕೇಟ್ ಬೇಕು ಮತ್ತು ಅದಕ್ಕೆ ರೆಕಮೆಂಡ್ ಆಗಬೇಕಾಗುತ್ತದೆ. ಅದು ಆದ ನಂತರ ಜಿಲ್ಲಾ ಮಂತ್ರಿಗಳಿಂದ ಹಾಗೂ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಂದ ರೆಕ್‌ಮೆಂಡ್ ಮಾಡಿದ ಮೇಲೆ ಸ್ಟೇಟ್ ಅವಾರ್ಡ್ ಬರುತ್ತದೆ. ಇಂತಹ ಒಂದು ಪದ್ಧತಿಯನ್ನು ಆದಷ್ಟುಬೇಗ ಕೈಬಿಟ್ಟರೆ ಶಿಕ್ಷಕರಿಗೆ, ಶಿಕ್ಷಣಕ್ಕೆ ಒಳ್ಳೆಯದಾಗುತ್ತದೆಂದು ನನ್ನ ಭಾವನೆ. ಈ ಪುಸ್ತಕಗಳ ವಿತರಣೆ ಬಗ್ಗೆ ನಾನು ಕೆಲವೊಂದು ಮಾತುಗಳನ್ನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ತಮಗೆ ಇದರ ಬಗ್ಗೆ ಗೊತ್ತಿದೆ. ಬೀದರ್‌ದಲ್ಲಿ ಯಾವ ರೀತಿ ಆಯಿತು. ಪುಕ್ಕಟೆ ಒದಗಿಸಿದಂಥ ಪುಸ್ತಕಗಳು ಪೇಟೆಯಲ್ಲಿ ದುಡ್ಡಿಗೆ ಮಾರಾಟವಾಯಿತು. ಹಾಗೆ ಮಾರಾಟವಾಗಬೇಕಾದರೆ ತಪ್ಪಿತಸ್ಥರಿಗೆ ಶಿಕ್ಷೆ ಮಾಡಲಿಕ್ಕೆ ಪ್ರಯತ್ನ ನಡೆದಿದೆಯೇ? ಈ ಪ್ರಯತ್ನ ಕೊನೆ ಮುಟ್ಟುತ್ತದೆ ಎಂದು ನನಗನ್ನಿಸುವುದಿಲ್ಲ. ಎಲ್ಲಾ ಅಧಿಕಾರಿಗಳಿಗೆ ಕೆಳಗಿನಿಂದ ಮೇಲಿನವರೆಗೆ ದೇ ಹ್ಯಾವ್ ಗ್ಯಾಂಗ್‌ಡ್-ಅಫ್, ಎಲ್ಲಾ ಕಡೆಗೂ ರಾಜ್ಯದ ಎಲ್ಲಾ ವಿಭಾಗಗಳಲ್ಲೂ ಕೂಡ ಎಲ್ಲಾ

ಲಾಖೆಗಳಲ್ಲಿಯೂ ಕೂಡ ಕೆಳಗಿನಿಂದ ಮೇಲಿನವರೆಗೆ ದೇ ಗ್ಯಾಂಗ್ಡ್-ಅಫ್ ಯಾರ ಮೇಲೆ ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಹೋಗುತ್ತೀರಿ. ಆ್ಯಕ್ಷನ್ ತೆಗೆದುಕೊಂಡರೆ ಅವರು ಉಸಿರುಗಟ್ಟಿಸುವಂತಹ ಾತಾವರಣ ಮೂಡಿಸುತ್ತಾರೆ. ಆ ರೀತಿಯಾಗಿರತಕ್ಕಂಥ ಒಂದು ಪರಿಸ್ಥಿತಿ ಬರಿ ವಿದ್ಯಾ ಇಲಾಖೆಯಲ್ಲಿ ಲ್ಲ, ಎಲ್ಲಾ ಇಲಾಖೆಯಲ್ಲಿಯೂ ಇದೆ. ಇಲ್ಲಿ ಒಂದು ಮಾತನ್ನು ಹೇಳಿದರೆ ಅದು ಅಪ್ರಸ್ತುತ ಗಲಾರದು. ಒಂದು ಫೋರ್ಜರಿ ಪ್ರಕರಣವನ್ನು ನಾನು ಕಂಡುಹಿಡಿದೆ. ಆ ಪ್ರಕರಣ ಕೂಡ ಫೋರ್ಜರಿ ಂದು ಆಯಿತು. ಅದನ್ನು ಯಾರು ಮಾಡಿದ್ದಾರೆ ಎನ್ನುವುದು ಗೊತ್ತಾಯಿತು. ಆದರೆ ಅದು ಇನ್ನುವರೆಗೆ ನು ಆಯಿತು ಎಂಬುದು ಗೊತ್ತಾಗಲಿಲ್ಲ, ಅದು ಏನೂ ಆಗಲಿಲ್ಲ. ಈ ಒಂದು ಸನ್ನಿವೇಶದಲ್ಲಿ ಾವುಗಳು ಇದನ್ನು ಯಾವ ರೀತಿ ಸುಧಾರಿಸುತ್ತೀರಿ ಅದು ಪೂರ್ಣವಾಗುವಂತೆ ಕಾಣುವುದಿಲ್ಲ. ತಾವು ುಂದಿನ ವರ್ಷ ಅಥವಾ ಎರಡು ತಿಂಗಳಲ್ಲಿ ಯಾರನ್ನು ತಾವು ಶಿಕ್ಷೆಗೆ ಒಳಪಡಿಸಿದ್ದೀರಿ. ಎಂಬುದನ್ನು ೀಳಬೇಕಾಗುತ್ತದೆ. ಯಾರಿಗೆ ಶಿಕ್ಷೆ ಆಗಿದೆ, ಎಂಬುದನ್ನು ತಾವು ಹೇಳಿದರೆ ನಾನು ಕೃತಜ್ಞನಾಗುತ್ತೇನೆ. ಈಗ ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆ ಆಗಿರುವಂತಹ 80 ಪರ್ಸೆಂಟ್ ಹಾಜರಾತಿ ಆದ ುಕ್ಕಳಿಗೆ 3 ಕೆಜಿ ಪುಕ್ಕಟೆ ಆಹಾರ ಕೊಡುತ್ತಿದ್ದಾರೆ. ಆ ಶಿಕ್ಷಕರ ಹಾಜರಾತಿ ಏಕೆ ಬೇಕು. ಆ ಶಿಕ್ಷಕರು 0 ಪರ್ಸೆಂಟ್ ಹಾಜರಾತಿ ಇದ್ದ ಹುಡುಗರಿಗೆ ಹಾಜರಾತಿ ಏಕೆ ಹಾಕಬಾರದು, ಏಕೆ ಅವರ ತಂದೆ ಾಯಿಗಳಿಂದ ದ್ವೇಷ ಕಟ್ಟಿಕೊಳ್ಳಬೇಕು. ಹಾಗೆ ಅನೇಕ ಶಾಲೆಗಳಲ್ಲಿ ಹಾಜರಾತಿ 80 ಪರ್ಸೆಂಟ್ ಇಲಲ್ಲೋ ಾವರಿಗೂ 80 ಪರ್ಸೆಂಟ್ ಕೊಡುತ್ತಿದ್ದಾರೆ. ಇದಕ್ಕಾಗಿ ಕಟ್ಟುನಿಟ್ಟಿನ ಕ್ರಮ ಅಗತ್ಯ. ಹೀಗೆ ಮಾಡುವುದರಿಂದ ತಮ್ಮ ಉದ್ದೇಶ ಸಫಲವಾಗುವುದಿಲ್ಲ. ತಮ್ಮ ಉದ್ದೇಶ ಏನು? ಹುಡುಗರು ಿಯಮಿತವಾಗಿ ಶಾಲೆಗೆ ಬರಬೇಕು. ಶಾಲೆಗೆ ಬಂದು ಶಿಕ್ಷಣ ಮಟ್ಟ ಹೆಚ್ಚಬೇಕು. ಶಿಕ್ಷಕರು ಹೆಚ್ಚಬೇಕು ಎನ್ನುವಂತಹ ಸನ್ನಿವೇಶದಲ್ಲಿ ಕೇವಲ 40-50 ಪರ್ಸೆಂಟ್ ಹಾಜರಾತಿ ಹುಡುಗರಿಗೂ ಕೂಡ ತಾವು 30 ಪರ್ಸೆಂಟ್ ಹಾಜರಾತಿ ಕೊಟ್ಟರೆ ತೊಂದರೆಯಾಗುತ್ತದೆ. ಇದರಿಂದ ನಿಮ್ಮ ಉದ್ದೇಶ ಸಫಲವಾಗುವುದಿಲ್ಲ. ಸರ್ಕಾರಕ್ಕೆ ಖರ್ಚಾಗುತ್ತದೆಯೇ ಹೊರತಾಗಿ ತಾವು ಏನು ಉದ್ದೇಶವನ್ನು ಗಮನದಲ್ಲಿಟ್ಟುಕೊಂಡಿದ್ದಾರೋ ಅದು ಸಫಲವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳಲಿಕ್ಕೆ ಇಚ್ಛಿಪಡುತ್ತೇನೆ. ಆಪರೇಷನ್ ಬ್ಲಾಕ್‌ಬೋರ್ಡ್ ಎಂದು ಹೇಳತಕ್ಕಂಥ ಕೇಂದ್ರ ಸರ್ಕಾರದ ಯೋಜನೆ ಬಂತು. ಅನೇಕ ಪ್ರಾಥಮಿಕ ಶಾಲೆಗಳಲ್ಲಿಯೂ ನೇಮಕಾತಿ ಆಯಿತು. ಅವರಿಗೆ ಬೇಕಾಗಿರತಕ್ಕಂಥ ಶೀಕ್ಷೋಪಕರಣಗಳನ್ನು ಕೊಟ್ಟಿರಿ. ಆದರೆ ಈ ಬ್ಲಾಕ್‌ಬೋರ್ಡ್ ಶಿಕ್ಷಕರ ಗತಿ ಏನಾಗಿದೆ? 4-6 ತಿಂಗಳುಗಳಿಂದ ಇವರಿಗೆ ಪಗಾರ ಸಿಗುವುದಿಲ್ಲ. ತಾವೇ ನೇಮಿಸಿರತಕ್ಕಂಥ ಶಿಕ್ಷಕರು. ತಮ್ಮ ಸರ್ಕಾರದಿಂದ ನೇಮಿಸಿರತಕ್ಕಂಥ ಶಿಕ್ಷಕರು. ಮೆರಿಟ್ ಆಧಾರದ ಮೇಲೆ ಆಯ್ಕೆಯಾಗಿರತಕ್ಕಂಥ ಶಿಕ್ಷಕರು. ಅವರಿಗೆ 4-6 ತಿಂಗಳುಗಳಾದರೂ ಸಂಬಳ ಕೊಡುವುದಿಲ್ಲ. ಇದು ಯಾವ ನ್ಯಾಯ? ಕೇಂದ್ರ ಸರ್ಕಾರದಿಂದ ಬರತಕ್ಕಂಥ ದುಡ್ಡು ತಡವಾಗಬಹುದು. ನಿಮಗೆ ಬಜೆಟ್‌ದಿಂದ ಕೊಡಲಿಕ್ಕೆ ಏನಾಗಿದೆ? ಜಿಲ್ಲಾ ಪಂಚಾಯತ್‌ದಿಂದ ಅಥವಾ ನಿಮ್ಮ ಬಜೆಟ್‌ನಿಂದ ಹಣ ಕೊಟ್ಟು Why don't you get it reimbursed? ಆ ಶಿಕ್ಷಕನು ಬೇರೆ ಊರಿನಲ್ಲಿ ಕೆಲಸ ಮಾಡುತ್ತಿರುವುದರಿಂದ ಅವನಿಗೆ ಪಗಾರ ಇರುವುದಿಲ್ಲ. ಅಂಗಡಿಗೆ ಹೋದರೆ ಆ ಶಿಕ್ಷಕನಿಗೆ ಸಾಮಾನು ಕೊಡುವುದಿಲ್ಲ. ನೀವು 4-6 ತಿಂಗಳು

ಆದ ಮೇಲೆ ಕೊಡುತ್ತೀರೆಂದು ಹೇಳುತ್ತಾರೆ. ಅಂತಹ ಪರಿಸ್ಥಿತಿ ತಮ್ಮ ಇಲಾಖೆಯ ಗೌರವಾನ್ವಿ ಶಿಕ್ಷಕರಿಗೆ ಬರದೇ ಇರಲು ಸೂಕ್ತ ವ್ಯವಸ್ಥೆ ಮಾಡಬೇಕು ಎಂದು ಸಲಹೆ ಮಾಡುತ್ತಿದ್ದೇನೆ. ತಾ ಎಲ್ಲರಿಗೂ ಒಂದು ಒಳ್ಳೆಯದು ಮಾಡಬೇಕು, ಜನತೆಗೆ ಒಳ್ಳೆಯದು ಆಗಬಹುದೆಂದು ತಾ ಮಾಡುತ್ತಿದ್ದೀರಿ. ನಮ್ಮ ರಾಜ್ಯದ ನೀತಿ ಕನ್ನಡಕ್ಕೆ ಪ್ರಾಧಾನ್ಯತೆ. `Prime importance to Kannad ಹಾಗಾದರೆ ಭಾಷಾ ಅಲ್ಪಸಂಖ್ಯಾತರಿಗೆ ಏನು ಮಾಡುತ್ತಿದ್ದೀರಿ ವಿಷ ಕುಡಿಸುತ್ತಿದ್ದೀರಾ ನೀ ಸಾವಕಾಶವಾಗಿ ಕೇಳಿ. Are you giving a slow poison? ಏನು ಮಾಡಬೇಕಾಗುತ್ತದೆ ಅವ ಸಲುವಾಗಿ? ಉರ್ದು ಶಾಲೆ ತೆಗೆಯುತ್ತಿದ್ದೀರಿ, ನಿಮ್ಮ ಸರ್ಕಾರದಲ್ಲಿ ಉರ್ದುಗೆ ಪ್ರಾಶಸ್ತ್ಯ ಇದೆಯೇ ಕನ್ನಡ ಕಲಿತವರು, ಕನ್ನಡ ಬಂದರೆ, ಕನ್ನಡ ಬೆರಳಚ್ಚು ಮಾಡಲಿಕ್ಕೆ ಬಂದರೆ ಮಾತ್ರ ನೀವು ಅವರಿ ಸ್ಥಾನ ಕಲ್ಪಿಸಿಕೊಡುತ್ತೀರಿ. ಈ ಅಲ್ಪಸಂಖ್ಯಾತರು ಪಾಪ ಒಳ್ಳೆಯ ಜನ ಇರುತ್ತಾರೆ. ಪ್ರಾಮಾಣಿಕವಾ ಇರುತ್ತಾರೆ. ಕಲಿಯತಕ್ಕಂಥ ಲವಲವಿಕೆ ಇರುವಂತಹವರು, ಉರ್ದು ಶಾಲೆಗೆ ಕಳುಹಿಸಿ ಎಂ ಹೇಳುತ್ತೀರಿ ಉರ್ದು ಶಾಲೆಗೆ ಹೋಗುತ್ತಾರೆ, 5ನೇ ತರಗತಿಯವರೆಗೆ ಮುಗಿಸುತ್ತಾರೆ. ನಂತರ ಅವ ಎಲ್ಲಿ ಹೋಗಬೇಕು? ನಂತರ ಅವರು ಪರ ಊರಿಗೆ ಹೋಗಬೇಕಾಗುತ್ತದೆ. ಎಲ್ಲಾ ಕಡೆಗೂ ಹೈಸ್ಕೂ ಇರುವುದಿಲ್ಲ. ಕಾಲೇಜುಗಳಿಗೆ ಹೋಗುವುದಕ್ಕಾಗುವುದಿಲ್ಲ. ಕಾಲೇಜು ಜಿಲ್ಲೆಗೆ ಒಂದು ಕಡೆ ಇರುವುದರಿಂ ಯಾರಿಗೂ ಹೋಗುವ ಸಾಮರ್ಥ್ಯ ಇರುವುದಿಲ್ಲ. ಅವರ ವಿದ್ಯಾಭ್ಯಾಸ ಅಲ್ಲಿಗೆ ಮುಗಿಯಿತು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮುಗಿಯುತ್ತದೆ. ಅವರು ಯಾವ ರೀತಿಯಾಗಿ ಎಲ್ಲಿ ಹೋಗಲಿಕ್ಕೆ ಬರುತ್ತದೆ? ಅವರು ಇಂಜಿನಿಯರ್ ಆಗುತ್ತಾರೆಯೇ ಅವರು ಡಾಕ್ಟರಾಗುತ್ತಾರೆಯೇ ಅವರು ವಿಜ್ಞಾನಿಯಾಗುತ್ತಾರೆಯೇ? ತಮ್ಮ ಸರ್ಕಾರದ ಉನ್ನತ ಶಿಕ್ಷಣವಾದ ಐ.ಎ.ಎಸ್, ಕೆ.ಎ.ಎಸ್ ಐ.ಪಿ.ಎಸ್, ಆಫೀಸರ್ಸ್ ಆಗುತ್ತಾರಾ, ಏನಾಗುತ್ತಾರೆ, ಏನು ಮಾಡಬೇಕು ಅವರು? ಅವರು 4ನೆ ತರಗತಿ ಮುಗಿಸಿಕೊಂಡು 4-5ನೇ ತರಗತಿ ವಿದ್ಯಾಭ್ಯಾಸ ಮಾಡಿಕೊಂಡು ಅವರು ಏನ ಮಾಡಬೇಕು? ಡ್ರೈವರ್ ಆಗಬಹುದು, ಕೊಡೆ ರಿಪೇರಿ, ತಾವು ನೋಡಿ ಇದು ರಾಜ್ಯಾದ್ಯಂ ಇರತಕ್ಕಂಥ ಸನ್ನಿವೇಶ. ಗ್ಯಾರೇಜ್‌ನಲ್ಲಿ ಕೆಲಸ ಮಾಡತಕ್ಕಂಥವರು, ಇದನ್ನೇ ಮಾಡತಕ್ಕಂಥ ರೀತಿಯನ್ನು ನೀವು ಕಲ್ಪಿಸಿ ಕೊಡುತ್ತಿದ್ದೀರಿ. ಇದು ಯಾವ ನ್ಯಾಯ? ಹಾಗೆಯೇ ನಮ್ಮ ರಾಷ್ಟ್ರ ಮುಖ್ಯವಾಹಿನಿಯಲ್ಲಿ ಬೆರೆತು ಹೋಗುಬೇಕೆಂದು ಹೇಳುತ್ತೀರಿ. ಎಲ್ಲರೂ ಸಮರಸವಾಗಿ ಹೋಗಬೇಕೆಂದ ಹೇಳುತ್ತೀರಿ. ಏನಾಗುತ್ತಿದೆ, ಎಲ್ಲಿ ಉರ್ದು ಮಾತೃಭಾಷೆಯಾಗಿದೋ ಅಲ್ಲಿ ಹಿಂದೂ ಹುಡುಗರು ಹೋಗುತ್ತಾರೆ, ಕ್ರಿಶ್ಚಿಯನ್ನರು ಮುಸಲ್ಮಾನ್ ಹುಡುಗರು ಹೋಗುತ್ತಾರೆ. ಎಲ್ಲಿ ಮಾತೃಭಾಷೆ ಇಲ್ಲವೋ ಅಲ್ಲಿ ಹಿಂದು ಬಹುಸಂಖ್ಯಾತರು ಕನ್ನಡ ಶಾಲೆಗೆ ಹೋಗುತ್ತಾರೆ ಇಂಗ್ಲೀಷ್ ಪ್ರಾಥಮಿಕ ಶಾಲೆಗ ಹೋಗುತ್ತಾರೆ. ಅಲ್ಪಸಂಖ್ಯಾತರ ಮಕ್ಕಳು ಆ ಉರ್ದು ಮೀಡಿಯಂ ಸ್ಕೂಲಿಗೆ ಹೋಗುತ್ತಾರೆ. ಚಿಕ್ಕಂದಿನಲ್ಲಿಯೇ ನಾವು ಪರಸ್ಪರ ಅರಿತುಕೊಳ್ಳಲಿಕ್ಕೆ ಸಾಧ್ಯಾವಾಗುವುದಿಲ್ಲ. ನಾವು ಆಡಿ ಹೊಡೆದಾಡಿ, ಓಡಾಡಿ, ನಕ್ಕು ನಲಿದು ಬೆರೆಯುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಈ ಎರಡು ತರಹದ ಮಕ್ಕಳು ಬೇರೆ ಭೇರೆಯಾಗಿ ಬೆಳೆಯತಕ್ಕಂಥ ಒಂದು ರೀತಿಯನ್ನು ಕಲ್ಪಿಸಿಕೊಡುತ್ತಿದ್ದೀರಿ. ಇದರಿಂದ ನ್ಯಾಶನಲ್ ಇಂಟೆಗ್ರೇಷನ್ ಆಗುತ್ತಿದೆ ಏನು? ಅಲ್ಪ ಸಂಖ್ಯಾತರ ಮೇಲೆ ಬಹುಸಂಖ್ಯಾತರಿಗೆ ಸಂಶಯ.

ಹುಸಂಖ್ಯಾತರಿಗೆ ಅಲ್ಪಸಂಖ್ಯಾತರ ಮೇಲೆ ಸಂಶಯ. ಈ ಸಂಶಯ ಪ್ರವೃತ್ತಿ ಬೆಳೆದು ಹೋಗಲಿಕ್ಕೆ ಾವು ಆಸ್ಪದ ಕೊಡುವುದಿಲ್ಲವೇನು? ಯಾತಕ್ಕಾಗಿ ಮಾಡುತ್ತಿದ್ದೇವೆ? ಯಾರಾದರೂ ಐ.ಎ.ಎಸ್, .ಪಿ.ಎಸ್ ಆಫೀಸರ್ ಆಗಿದ್ದರೆ ಅವರು ಯಾರು ಉರ್ದು ಶಾಲೆಗೆ ಹೋಗಿರತಕ್ಕಂಥ ಮಕ್ಕಳಲ್ಲಿ ವರು ಕನ್ನಡ ಶಾಲೆಗೆ ಹೋಗಿರತಕ್ಕಂಥ ಮಕ್ಕಳು ಅಥವಾ ಇಂಗ್ಲೀಷ್ ಸ್ಕೂಲಿಗೆ ಹೋಗಿರತಕ್ಕಂಥ ುಕ್ಕಳು. ಹಾಗಾಗಿ ಯಾರು ಕ್ರೀಮ್ ಇರುತ್ತಾರೆ ಆ ಕ್ರೀಮ್ ಇರತಕ್ಕಂಥ ಜನಸಂಖ್ಯೆ ಉರ್ದು ೀಡಿಯಮ್ ಶಾಲೆಗೆ ಕಳುಹಿಸುವುದಿಲ್ಲ. ಕೇವಲ ಬಡವರು ಮಾತ್ರ ಶಾಲೆಗೆ ಹೋಗುತ್ತಾರೆ. ಆ ಡವರನ್ನು ಬಡವರಾಗಿ ಇಟ್ಟು ಆ ಅಶಿಕ್ಷಿತರನ್ನು ಮತ್ತಷ್ಟು ಅಶಿಕ್ಷಿತರನ್ನಾಗಿ ಮಾಡುವುದು ಸರ್ಕಾರದ ೋಚನೆಯೇ?

10.50 ಎ.ಎಂ

ತಾವು ಶಾಲೆಗಳನ್ನು ಸ್ಥಾಪಿಸುತ್ತೀರಿ. ಶಾಲಾ ಬ್ಯಾಗ್‌ಗಳನ್ನು ಕೊಡುವ ಪದ್ಧತಿ ಇತ್ತು. ಹೋದ ರ್ಷ ಅದನ್ನು ಕೈಬಿಟ್ಟಿರಿ? ಕಳೆದ ವರ್ಷ ಎಲ್ಲಾ ಶಾಸಕರನ್ನು ತೃಪ್ತಿಪಡಿಸುವುದಕ್ಕೋಸ್ಕರ ಾಸಕರಿಗೊಂದು ಇಂಗ್ಲೀಷ್ ಮೀಡಿಯಮ್ ಶಾಲೆ ಎಂದು ಹೇಳಿದಿರಿ. ಪ್ರಾಥಮಿಕ, ಪ್ರೌಢ ಶಾಲೆ ಂದು ಹೇಳಿದಿರಿ. ಇದು ಸರಿಯಾದ ಕ್ರಮವೇ? ನನಗೆ ಬೇಕಾದಂತಹ ಶಾಲೆಯನ್ನು ನಾನು ಾಕಿಸಿಕೊಳ್ಳುವುದಾರೆ ನಿಮ್ಮ ಸ್ಕೂಲ್ ಮ್ಯಾಪಿಂಗ್ ಏಕೆ? ನಿಮ್ಮ ಇಲಾಖೆ ಏಕೆ? ಎಲ್ಲಿ ಶಾಲೆಗಳ ವಶ್ಯಕತೆ ಇದೆಯೋ ಅಲ್ಲಿ ಶಾಲೆಗಳನ್ನು ತೆರೆಯಬೇಕಾಗುತ್ತದೆ. ಸ್ಕೂಲ್ ಮ್ಯಾಪಿಂಗ್‌ಅನ್ನು ರಿಯಾದ ರೀತಿಯಲ್ಲಿ ಮಾಡಿ. ಎಲ್ಲಿ ಶಾಲೆಗಳ ಅವಶ್ಯಕತೆ ಇದೆ ಅಲ್ಲಿ ಮಾಡಿ. ಶಾಲೆಗಳ ಅವಶ್ಯಕತೆ ದ್ದಲ್ಲಿ ತೆರೆದರೆ ಎಲ್ಲರಿಗೂ ಅನುಕೂಲವಾದೀತು. ಅದಲ್ಲದೆ ತಾವು ರಾಜಕಾರಣಿಗಳ ಮಾತನ್ನು ಕೇಳಿ ಲ್ಲಿಯಾದರೂ ಶಾಲೆ ಪ್ರಾರಂಭಿಸಿದರೆ ಈ ಶಾಲೆ ಸಿಕ್ ಆಗುವುದಷ್ಟೇ ಅಲ್ಲ ಇನ್ನೊಂದು ಶಾಲೆ ಕೂಡ ಕ್ ಆಗುತ್ತದೆ. ಅದಕ್ಕೆ ರೋಗ ಹಿಡಿಯುತ್ತದೆ. ಅದು ಮುಂದೆ ಬರುವುದಿಲ್ಲ. ಅಂತಹ ವ್ಯವಸ್ಥೆಯನ್ನು ಾನ್ಯ ಶಿಕ್ಷಣ ಸಚಿವರಾದ ಗೋವಿಂದೇಗೌಡರು ಮಾಡಬಾರದು. ಆ ಸಾಮರ್ಥ್ಯತೆ ಅವರಿಗೆ ಇದೆ. ದನ್ನು ಉಪಯೋಗ ಮಾಡಿಕೊಂಡು ಆ ರೀತಿ ಕಾರ್ಯಪ್ರವೃತ್ತರಾಗಬೇಕೆಂಬ ಸೂಚನೆಯನ್ನು ಕೂಡ ಾಡಲಿಕ್ಕೆ ಇಷ್ಟಪಡುತ್ತೇನೆ. ಶಾಶ್ವತ ಅನುದಾನ ರಹಿತ ಶಾಲೆಗಳು ಎಂದು ಇದೆ. ಎಲ್ಲಿ ವಿದ್ಯಾದಾನ ಡೆಯುತ್ತದೆಯೋ ಅಲ್ಲಿ ನೆರವಿಗೆ ಸರಕಾರ ಮುಂದೆ ಬರಬೇಕು. ಅದನ್ನು ಬಿಟ್ಟು ಅದನ್ನು ಶಾಶ್ವತ ನುದಾನ ರಹಿತಶಾಲೆಗಳು ಎಂದು ಏಕೆ ಇರಬೇಕು? ಅದಕ್ಕೇಕೆ ಅನುದಾನವನ್ನು ಕೊಡಬಾರದು? ಲ್ಲಿ ಹಣ ಮಾಡತಕ್ಕಂತಹ ಒಂದು ರೀತಿ ಇದೆಯೋ ಈ ಶಾಲೆಯನ್ನು ಮುಂದಿಟ್ಟುಕೊಂಡು ಹಣ ಂಪಾದನೆ ಮಾಡಲಿಕ್ಕೆ ಒಂದು ಮಾರ್ಗವನ್ನಾಗಿ ಮಾಡಿಕೊಂಡಿದ್ದಾರೋ ಅಂತಹ ಶಾಲೆಗಳಿಗೆ ನುದಾನ ಕೊಡಬೇಡಿ. ಸ್ಕೂಲ್ ಮ್ಯಾಪಿಂಗ್‌ನಂತೆ ಕೊಡಿ. ಅನುದಾನ ರಹಿತವೆಂದು ಯಾರ ತ್ತಡಕ್ಕೋಸ್ಕರ ಕೊಡುತ್ತೀರಿ? ಅದನ್ನು ಏಕೆ ಅಲೋ ಮಾಡುತ್ತೀರಿ. ಏತಕ್ಕಾಗಿ ಅದನ್ನು ಕೊಡುತ್ತೀರಿ. ಾವು ಶಿಕ್ಷಣದ ಕಡೆಗೆ ಗಮನ ಕೊಡಬೇಕೇ ಹೊರತಾಗಿ ಯಾವುದಕ್ಕೂ ಗಮನ ಕೊಡುವ ಅವಶ್ಯಕತೆ ಇಲ್ಲ. ರಾಜ್ಯಕ್ಕೆ ಉತ್ತಮ ಶಿಕ್ಷಣದ ಅವಶ್ಯಕತೆ ಇದೆ. ಹಾಗಿರಬೇಕಾದರೆ ಅನುದಾನ ರಹಿತ ಶಾಲೆಗಳನ್ನು ಏಕೆ ಮಂಜೂರು ಮಾಡುತ್ತೀರಿ? ಯಾವ ಅನುದಾನ ರಹಿತ ಶಾಲೆಗಳು ಇವೆಯೋ ಅವುಗಳು ಈಗ

ಸ್ಕೂಲ್ ಮ್ಯಾಪಿಂಗ್‌ನಲ್ಲಿ ಬಂದರೆ ಅದಕ್ಕೆ ಏಕೆ ಅನುದಾನ ಕೊಡುವುದಿಲ್ಲ? ಪರಿಷ್ಕರಣೆ ಮಾಡತಕ್ಕಂ ಕಾರ್ಯವೇಕೆ ಆಗುವುದಿಲ್ಲ? ಒಂದು ಸಮಿತಿಯನ್ನು ನೇಮಿಸಿ. ಯಾವ ಕಡೆಗಳಲ್ಲಿ ಶಾಲೆಗಳ ಅವಶ್ ಇದೆಯೋ ಆ ಶಾಲೆಗಳಿಗೆ ಅನುದಾನ ಕೊಡಿ. ಯಾವ ಶಾಲೆಗಳಲ್ಲಿ ವಿದ್ಯಾರ್ಥಿಗಳು ಇದ್ದಾರೋ ಅನುದಾನ ಕೊಡಿ. ಎಲ್ಲಿ ಪೀಠೋಕರಣಗಳು ಆಗಿದೆಯೋ ಅಲ್ಲಿ ಅನುದಾನ ಕೊಡಿ. ಮೂಲಭೂತವಾಗಿರತಕ್ಕಂತಹ ಕಟ್ಟಡ ನಿರ್ಮಾಣವಾಗಿದೆಯೋ ಅಲ್ಲಿ ಅನುದಾನ ಕೊಡಿ. ಅವ ಏಕೆ ಅನುದಾನರಹಿತರನ್ನಾಗಿ ಮಾಡುತ್ತೀರಿ. ಎಲ್ಲಿಯವರೆಗೆ ಅವರನ್ನು ಅನುದಾನರಹಿತ ಎಂ ಮಾಡುತ್ತೀರಿ? ಸರಕಾರ ಎಡವಿದಾಗ ಸರಕಾರ ಜನತೆಯ ಆಸೆಯನ್ನು ಪೂರೈಸದೇ ಹೋದಾಗ ಜ ಮುಂದೆ ಬಂದು ತಮ್ಮ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಲಿಕ್ಕೆ ಮುಂದೆ ಬಂದಾಗ ಶಾಲೆಯ ಪ್ರಾಮಾಣಿಕವಾಗಿ ಪ್ರಾರಂಭಿಸಿ ಒಳ್ಳೆಯತನದಿಂದ ನಡೆಸಿಕೊಂಡು ಹೋಗುತ್ತಿರಬೇಕಾದರೆ ಅವುಗಳ ಎಲ್ಲಿಯತನಕ ಅನುದಾನ ರಹಿತವೆಂದು ಮಾಡುತ್ತೀರಿ? ಅವರಿಗೆ ಎಲ್ಲಿಯತನಕ ಶಾಲೆಗಳ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ ? ಶಿಕ್ಷಕರಿಗೆ ಪಗಾರ ಕೊಟ್ಟು ಅನೇಕ ಮಕ್ಕ ಊಟ ಕೊಟ್ಟು ಸಬ್ಸಿಡಿ ಕೊಡಬೇಕಾಗುತ್ತದೆ. ಇಲ್ಲದೇ ಹೋದರೆ ಮಕ್ಕಳು ಬೇರೆ ಕಡೆಗೆ ಹೋಗುತ್ತಾ ಅಂತಹ ಒಂದು ಸನ್ನಿವೇಶದಲ್ಲಿ ಈ ಅನುದಾನರಹಿತ ಶಾಲೆಗಳಿಗೆ ಅನುದಾನಕ್ಕೆ ಒಳಪಡಿಸುವುದಿಲ್ಲವೆಂ ಹೇಳುವ ಹಠಮಾರಿತನ ಸಲ್ಲದು. ಅದನ್ನು ಪುನರಾವರ್ತಿಸಬೇಕಾಗುತ್ತದೆ. You will have think anew. ತಾವು ಹೇಳಿದ ಹಾಗೆ ಶಿಕ್ಷಣದ ಗುಣಮಟ್ಟ ಎತ್ತರಿಸಬೇಕಾಗುತ್ತದೆ. ಶಿಕ್ಷಣವೆಂ ಹೇಳಿದರೆ ಬರೀ ಅಕ್ಷರಾಭ್ಯಾಸ ಮಾತ್ರವಲ್ಲ. ಅಕ್ಷರಾಭ್ಯಾಸ ಮಾಡಿ ಡಿಗ್ರಿ ಪಡೆದು ಬರ ಉನ್ನತಮಟ್ಟದ ಶಿಕ್ಷಣವನ್ನು ಪಡೆದವರೂ ಕೂಡ ದೇಶದ್ರೋಹಿಯಾಗಿ ಪರಿಣಮಿಸಬಲ್ಲ ದೇ ಅವನಿಂದ ಏನೂ ಸಲ್ಲದೇ ಹೋಗಬಹುದು. ಬರೀ ತನ್ನ ಸ್ವಾರ್ಥವನ್ನು ಮಾಡಿಕೊಂಡು ಜೀ ಕಳೆಯಬಹುದು. ಅದರ ಸಲುವಾಗಿ ಒಂದು ನೈತಿಕ ಶಿಕ್ಷಣದ ಅವಶ್ಯಕತೆ ಪ್ರಾಥಮಿಕ ಹಂತದಿಂದ ಇದೆ. ಇದಕ್ಕೆ ನಾವೇನು ಮಾಡಿದೆವು. ಪಠ್ಯ ಪುಸ್ತಕ ಒಂದು ಕಡೆಗೆ ನೀತಿ ಪುಸ್ತಕ ಒಂದು ಕಡೆಗೆ. ಪು ಹೊರೆಯಾಗಬಾರದು ಎಂದು ನೀತಿ ಪುಸ್ತಕ ಬಿಟ್ಟೆವು. ಆ ಪಠ್ಯ ಪುಸ್ತಕ ಮಾತ್ರ ಉಳಿಯಿತು.

ಅಧ್ಯಕ್ಷರು : ನೀತಿ ಶಿಕ್ಷಣ ಹೇಳುವುದು ಬೇರೆ. ಡಿಎಲ್‌ಆರ್‌ಸಿ ರೆಕ್ರೂಟ್‌ಮೆಂಟ್‌ನಲ್ಲಿ ಏ ಮಾಡಿದ್ದಾರೆ. ಎಂದರೆ ರೋಸ್ಟರ್ ಸಿಸ್ಟಂ ಇಟ್ಟುಕೊಂಡು ರೋಸ್ಟರ್ ಸಿಸ್ಟಂ ಪ್ರಕಾರ ಮೆರಿಟ್ ಯಾ ಇದೆ ಅವರಿಗೆ ಕೊಡುತ್ತಾರೆ. ಮೆರಿಟ್ ಪ್ರಕಾರ ರೋಸ್ಟರ್ ಸಿಸ್ಟಂ ಪ್ರಕಾರ ಆಯ್ಕೆಯಾಗಿ ಅವ ಬೇರೇನೂ ಕೆಲಸ ಸಿಗುವುದಿಲ್ಲವೆಂದು ಮೇಷ್ಟ್ರು ಆಗುವುದಕ್ಕೆ ಬರುತ್ತಾರಾ ಅಥವಾ ಶಿಕ್ಷಕರಾ ಬರುವುದಕ್ಕೆ ಅವರಿಗೆ ಆಸಕ್ತಿ ಇದೆಯೇ? ಶಿಕ್ಷಕರಾಗಿ ಕೆಲಸ ಮಾಡತಕ್ಕಂತಹ ನಿಷ್ಠೆ ಇದೆಯೇ? ಒಂ ವೇಳೆ ಅವರಿಗೆ ಇಲ್ಲದೇ ಹೋದರೆ, ಅವರನ್ನು ಸೆಲೆಕ್ಟ್ ಮಾಡಿದ್ದಾದ ಮೇಲೆ ಕೂಡ ಅವರಿಗೆ ತಿಂಗಳು 1 ವರ್ಷವೋ ಅವರಿಗೆ ಸಪರೇಟ್ ತರಬೇತಿ ಆಗಬೇಕಲ್ಲಾ? ಮೊದಲು ಮಾನಸಿಕವಾ ಅವರು ತಯಾರಾಗಬೇಕು.

ಡಾ|| ಎಂ. ಪಿ. ಕರ್ಕಿ : ತಾವು ಕೇಳಿದ ಪ್ರಶ್ನೆಗೆ ನಾನು ಬರುತ್ತಿದ್ದೆ.

ಶ್ರೀ ಎಂ. ಪಿ. ಪ್ರಕಾಶ್ : ಶಿಕ್ಷಕರು ಮಾನಸಿಕವಾಗಿ ತಯಾರಾಗಬೇಕಾಗುತ್ತದೆ.

ಡಾ॥ ಎಂ. ಪಿ. ಕರ್ಕಿ : ಇದು ತುಂಬಾ ಸೂಕ್ಷ್ಮವಾದ ವಿಷಯ. ನಮ್ಮಲ್ಲಿ ಎಸ್.ಎಸ್.ಎಲ್.ಸಿ. ತಗೆ 2-3 ರ್‍ಯಾಂಕ್ ಪಡೆದಿರುವಂತಹ ವಿದ್ಯಾರ್ಥಿಗಳು ಅದರಲ್ಲೂ ಮಹಿಳೆಯರು ಟಿ.ಸಿ.ಹೆಚ್ ಿಯಲು ಹೋಗುತ್ತಾರೆ ತಾವೇಕೆ ಟಿ.ಸಿ.ಹೆಚ್ ಕಲಿಯುತ್ತೀರಿ ಬಿಎ., ಬಿಎಸ್‌ಸಿ., ಬಿಕಾಂ., ಏಕೆ ಾಡುವುದಿಲ್ಲವೆಂದು ಕೇಳಿದೆ. ಇಲ್ಲ ಒಮ್ಮೆ ಟಿಸಿಹೆಚ್ ಆದ ಕೂಡಲೇ ಟೀಚರ್ ಕೆಲಸ ಸಿಗುತ್ತದೆ ಯಂ ಆಗುತ್ತದೆ. ಖಾಯಂ ಆದ ಶಿಕ್ಷಕಿ ಆದರೆ ನಾನು ಮದುವೆಯಾಗುತ್ತೇನೆ ಇಲ್ಲದಿದ್ದರೆ ಗುವುದಿಲ್ಲವೆಂದು ಹೇಳುತ್ತಾರೆ. ಇದು ಒಂದು ಸಂಗತಿ. ಇರತಕ್ಕಂತಹ ವಿಷಯ ಇದು. ಸೂಕ್ಷ್ಮವಾದ ಷಯ ಇದು.

MR. SPEAKER : That is a very good thing. ನಾನು ಧಾರವಾಡದ ಒಂದು ಭೆಯಲ್ಲಿ ಹೇಳಿದೆ. ನಮ್ಮಲ್ಲಿ ಒಬ್ಬ ಗೆಳೆಯ he was working in KSRTC as Conductor. He 'as removed from service. Then, he was selected as teacher. A person who was emoved as conductor for committing mistake was chosen as teacher.

ಡಾ॥ ಎಂ. ಪಿ. ಕರ್ಕಿ : ಶಿಕ್ಷಕರು ಶಿಕ್ಷಕರಾಗಿ ಯಾವ ರೀತಿ ಇರಬೇಕೋ ಆ ರೀತಿ ಮಾಡುತ್ತಿಲ್ಲ. ದು ವಿಪರ್ಯಾಸ

MR. SPEAKER : The attitude for teaching in olden days.... ಬಹಳ ಓಲ್ಡ್ ಕೇಸ್ ಅಲ್ಲ ನಾನು 1949ರಲ್ಲಿ ಹುಟ್ಟಿದ್ದುದು. ನಾವು ಸ್ಟೂಡೆಂಟ್ಸ್ ಆಗಿರಬೇಕಾದರೆ ನಮ್ಮ ಪ್ರೈಮರಿ ಸ್ಕೂಲ್ ಅವಧಿಯಲ್ಲಿ the most respected man in the village was the teacher of the primary school.

ಡಾ॥ ಎಂ.ಪಿ. ಕರ್ಕಿ : ಹಿಂದಿನ ಕಾಲವನ್ನು ನಾವು ನೆನಪಿಸಿಕೊಂಡರೆ ಅದು ಪ್ರಸಕ್ತ ಸಮಯಕ್ಕೆ ಅವ್ಯವಹಾರಿಕವಾಗುತ್ತದೆ. ಏಕೆಂದರೆ ಆಗ ಶಿಕ್ಷಣ ಕೇವಲ ಕೆಲವರಿಗೆ ಮಾತ್ರ ಸೀಮಿತವಾಗಿತ್ತು ಶಾಲೆಗಳ ಸಂಖ್ಯೆ ಕಡಿಮೆ ಇತ್ತು. ಹಾಗಾಗಿ ಆ ಶಿಕ್ಷಕನಾಗಿರಲಿಕ್ಕೆ ಯೋಗ್ಯರಾದಂತಹವರು ಶಿಕ್ಷಣ ಖಾತೆಗೆ ಬರುತ್ತಿದ್ದರು. ಈಗ ಹಾಗಲ್ಲ. ಈಗ ಇದೊಂದು ತನ್ನ ಹೊಟ್ಟೆ ಹೊರೆಯತಕ್ಕಂತಹ ಕೆಲಸಕ್ಕೆ ಒಂದು ಅವಕಾಶ, ಅಷ್ಟಕ್ಕೆ ಮಾತ್ರ ಬರುತ್ತಿದ್ದಾರೆಯೇ ವಿನಹ ಶಿಕ್ಷಣದ ಬಗ್ಗೆ ಆಸ್ಥೆ ವಹಿಸತಕ್ಕಂತಹ ಜನ ಬರುತ್ತಿಲ್ಲ. ಒಂದು ಉದಾಹರಣೆ ಹೇಳುತ್ತೇನೆ 29 ವರ್ಷ ವಯಸ್ಸಾದವರಿಗೆ ಶಿಕ್ಷಕರಾಗಿ ನೇಮಿಸಬೇಕೆಂದು ಬೇರೆ ಲಿಸ್ಟ್ ಮಾಡಿದರು. ನಾನು ಒಂದು ಜಿಲ್ಲೆಯಲ್ಲಿ ಹೇಳಿದೆ. 29 ವರ್ಷ ವಯಸ್ಸಾಗಿರತಕ್ಕಂತಹವರು ಟಿ.ಸಿ.ಹೆಚ್ ಮುಗಿಸಿ 6-8 ವರ್ಷವಾಗಿರುತ್ತದೆ. ತಾವು ಹೇಳಿದ ಹಾಗೆ ಬೇರೆ ಬೇರೆ ಉದ್ಯೋಗಕ್ಕೆ ಹೋಗಬಹುದು. ನಮ್ಮಲ್ಲಿ ಒಬ್ಬರು ದಿನಸಿ ಅಂಗಡಿ ಇಟ್ಟುಕೊಂಡಿದ್ದರು ಬಹಳ ಚೆನ್ನಾಗಿ ನಡೆಯುತ್ತಿತ್ತು ಅವನಿಗೆ ಅದೂ ಬೇಕು ಇದೂ ಬೇಕು ಏನು ಮಾಡುವುದು ಎಂದು, ವಿಚಾರ ಮಾಡಿ ದಿನಸಿ ಅಂಗಡಿ ತಾನು ಇಟ್ಟುಕೊಂಡ ಅಲ್ಲಿ ಒಂದು 500 ರೂಪಾಯಿ ಕೊಟ್ಟು ಒಬ್ಬನನ್ನು ನೇಮಿಸಿದ. ಹಾಗೇ 29 ವರ್ಷ ವಯಸ್ಸಿಗಿಂತ ಹೆಚ್ಚು ಇರತಕ್ಕಂತಹ ಜನರಿಗೆ, ಅವರಿಗೆ ಅರಿವು ಆಗಿರತಕ್ಕಂತಹವರಿಗೆ ಯೋಗ್ಯತೆ ಇದ್ದವರಿಗೆ ಕೊಡಬೇಕು. ತಾವೇನು ಈಗ ಮುಕ್ತ ದ್ವಾರ ತೆರದಿದ್ದೀರಿ ಅದರ ಬಗ್ಗೆ ವಿಚಾರ ಮಾಡಬೇಕು.

ಟಿ.ಸಿ.ಹೆಚ್. ಕಲಿತು ಅನೇಕ ವರ್ಷಗಳಿಂದ ನೌಕರಿ ಇಲ್ಲದೇ ಇರತಕ್ಕಂತಹ ಜನ ಏನು ಇರುತ್ತಾ ಅವರಿಗೆ ಇದು ಅವಕಾಶ ಮಾಡಿಕೊಟ್ಟರೆ ಸರಿ. ಆದರೆ ಈ ಅವಕಾಶದಿಂದ ಶಿಕ್ಷಣಕ್ಕೆ ಅ ಮಾರಕವಾಯಿತು. ಅವರಿಗೆ ಕಲಿಸುವುದೇ ಗೊತ್ತಿಲ್ಲ. ಎಲ್ಲಾ ಮರೆತುಹೋಗಿದೆ. ವಿಷಯ ಗೊತ್ತಿಲ್ಲ. ಕನ್ನಡವೂ ಗೊತ್ತಿಲ್ಲ, ಏನೂ ಗೊತ್ತಿಲ್ಲದಂಥ ಪರಿಸ್ಥಿತಿಯಾಗಿದೆ. ಅಂಥವರಿಗಾದರೂ ಕೂ ತಾವು ಆರು ತಿಂಗಳೋ ಎಂಟು ತಿಂಗಳೋ ಯಾರು 29 ವರ್ಷದ ಮೇಲಿದ್ದಾರೆ, ಯಾ ಶಿಕ್ಷಕರಾಗಿದ್ದಾರೆ ಅವರಿಗೆ ಕಡ್ಡಾಯವಾಗಿ ಆರು ತಿಂಗಳು ಟ್ರೈನಿಂಗನ್ನು ಕೊಡುವ ವ್ಯವಸ್ಥೆಯ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ಶಿಕ್ಷಣ ಸರಿಹೋಗುವುದಿಲ್ಲ. ನೈತಿಕ ಶಿಕ್ಷಣದ ಬಗ್ಗೆ ನ ಶಿಕ್ಷಣ ನೀತಿಯಲ್ಲಿ ನಾನು ಬೇರೆ ಬೇರೆ ಹೇಳಿದೆ. ರಾಷ್ಟ್ರದ ಬಗ್ಗೆ ಪರಿಕಲ್ಪನೆ ಬರಬೇಕು ಒಳ್ಳೆಯದಾಗಬೇಕು ಎಂದೆಲ್ಲ ಬಹಳ ಚೆನ್ನಾಗಿ ಪುಸ್ತಕಗಳನ್ನು ಬರೆದಿದ್ದಾರೆ. ಆದರೆ ಇದೆ ಆಗುತ್ತಿದೆಯೇ? ಏನಾಗುತ್ತಿದೆ? ನಮ್ಮಲ್ಲಿ ನೀತಿಯ ಬಗ್ಗೆ ಒಂದಾದರೂ ಪಾಠ ಇದೆಯೇ? ನಾವು ಅನೇ ರೀತಿಯಲ್ಲಿ ಮಾಡಬಹುದು, ಗಾಂಧೀಜಿ, ನೆಹರೂ, ಸುಭಾಷ್‌ಚಂದ್ರಬೋಸ್ ಮುಂತಾದವ ಕತೆಗಳನ್ನು ಹಾಕಬಹುದು. ನಾವೆಲ್ಲ ಚಿಕ್ಕವರಿರುವಾಗ ಕಲಿತಿದ್ದೇವೆ. "ಕೋಳಿ ಕೂಗುವ ಮುನ್ನ ಏ ನೀ ಬಾಲ" ಎನ್ನುವಂಥದ್ದು. ಬೆಳಿಗ್ಗೆ ಎದ್ದು ಏನೇನು ಮಾಡಬೇಕು ಎನ್ನುವಂಥದ್ದು ಒಂದನೇ ಇಯತ್ತೆ ಇತ್ತು. ಈಗ ಇದೆಯಾ? ಏನೂ ಇಲ್ಲ. ಯಾವ ರೀತಿ ನಾವು ಜೀವನದಲ್ಲಿ ನಡೆದುಕೊಳ್ಳಬೇಕು ಯಾರು ನಮಗೆ ಆದರ್ಶಪ್ರಾಯರು? ಯಾವ ಆದರ್ಶಗಳನ್ನು ಇಟ್ಟುಕೊಳ್ಳಬೇಕು? ಇದೆಲ್ಲಾ ಸಣ್ಣ ಸ ಕತೆಗಳ ಮುಖಾಂತರವಾಗಿ ನಾವು ಆ ಒಂದು ಎಳೆ ಮನಸ್ಸಿನಲ್ಲಿ ಬಿಂಬಿಸಿದರೆ ಹೆಚ್ಚಿನ ಪರಿಣಾಮವಾಗುತ್ತದೆ ನಾವು ಅದಕ್ಕೇನು ಸೂತ್ರ ಹೇಳಬೇಕಾಗಿಲ್ಲ. ಈ ರೀತಿ ನಡೆದುಕೊ ಎಂದು ಹೇಳಬೇಕಾಗಿಲ್ಲ. ಅವ ಕಣ್ಣೆದುರಿಗೆ ಕಟ್ಟುವುದು ಆ ಚಿತ್ರ. ಆ ಚಿತ್ರದಂತೆ ನಡೆದುಕೊಂಡು ಹೋಗಬೇಕು ಎಂದು ಹೇಳು ಒಂದು ರೀತಿಯ ಮಾನಸಿಕವಾಗಿರುವ ಪರಿಕಲ್ಪನೆ ಅವರಿಗೆ ಬರುತ್ತದೆ. ಗಾಂಧೀಜಿ ಸುಳ್ಳು ಹೇಳಲಿ ಎನ್ನುವ ಒಂದು ಪಾಠ ಇದೆ. ಆ ಪಾಠ ಗಾಂಧಿ ಸುಳ್ಳು ಹೇಳಲಿಲ್ಲ, ಅಷ್ಟೇ ಅಲ್ಲ, ನಾನು ನನಗೆ ಅನ್ವಯ ಮಾಡಿಕೊಳ್ಳುತ್ತೇನೆ. ವಿದ್ಯಾರ್ಥಿಯಾಗಿರುವವನು ಗಾಂಧಿಯಂತೆ ನಡೆದುಕೊಳ್ಳಬೇಕು, ನಾನೂ ಕೂಡ ಸುಳ್ಳು ಹೇಳಬಾರದು ಎನ್ನುವ ಭಾವನೆ ಒಂದು ರೀತಿಯ ಪ್ರಕ್ರಿಯೆ ಅವನ ಮೇಲೆ ಪ್ರಾರಂಭವಾಗುತ್ತದೆ ಆ ಪ್ರಕ್ರಿಯೆಗೆ ಚಾಲನೆ ಕೊಡುವ ವಿಷಯವನ್ನು ನಾವು ಅಳವಡಿಸಬೇಕಾಗುತ್ತದೆ. ಹಾಗೆಯೇ ನಮ ಹಳೆಯ ಯೋಧರ ಕಥೆಗಳ ಬಗ್ಗೆ ರಾಮಾಯಣ, ಮಹಾಭಾರತ ಕಥೆಗಳು, ಪುರಾಣ, ಬೈಬಲ್ ಕಥೆಗಳನ್ನು ಅಳವಡಿಸಿ. ರಾಮಾಯಣ ಮಹಾಭಾರತ ಎಂದ ಕೂಡಲೇ ನಾವೆಲ್ಲಾ ಕಮ್ಯುನಲ್‌ಗಳಾಗಿ ಬಿಡುತ್ತೇವೇನು? ಖುರಾನ್ ಬೈಬಲ್ ಕತೆಗಳನ್ನೂ ಅಳವಡಿಸಿ. ಎಲ್ಲರೂ ಕಲಿಯಲಿ. ಖುರಾನ್‌ನಲ್ಲಿ ಏನಿದೆ, ಬೈಬಲ್‌ನಲ್ಲಿ ಏನಿದೆ, ಎಲ್ಲರೂ ಅದನ್ನು ಗೊತ್ತುಮಾಡಿಕೊಳ್ಳಲಿ. ನಮಗೆ ಚಾಂದ್‌ಬೀಬಿ ಕಥೆ ಇತ್ತು. ನಾವು ಅದನ್ನು ಕಲಿಯಬೇಕಾಗಿತ್ತು. ನಾವು ಅದನ್ನು ಬೇರೆ ಎಂದು ತಿಳಿದುಕೊಳ್ಳಲಿಲ್ಲ. ಹಾಗೆಯೇ ಎಲ್ಲಾ ಧರ್ಮದಲ್ಲಿರುವ ಒಳ್ಳೆಯ ಕಥೆಗಳನ್ನು ಆರಿಸಿಕೊಡಿ. ನಮ್ಮ ರಾಜ್ಯ ಸರ್ಕಾರದಲ್ಲಿ 1984ರಲ್ಲಿ ಎಂದು ಕಾಣುತ್ತದೆ, ರಾಮಾಯಣ, ಮಹಾಭಾರತಗಳ ಪರೀಕ್ಷೆಯನ್ನು ಸರ್ಕಾರಿ ಶಾಲೆಗಳಲ್ಲಿ ನಡೆಸಬಾರದು ಎಂದು ಹೇಳಿ ಒಂದು ಆರ್ಡರ್ ಬಂತು. ಏಕೆ? ಮಹಾಕಾವ್ಯಗಳು ನಡೆಯಬಾರದೇ?

ವು ಇಲ್ಲಿ ಆಗ ಸತ್ಯಾಗ್ರಹವನ್ನು ಮಾಡಬೇಕಾಯಿತು. ಸತ್ಯಾಗ್ರಹ ಮಾಡಿದ ಮೇಲೆ ಸರ್ಕಾರಿ ಜ್ಞೆಯನ್ನು ಹಿಂತೆಗೆದುಕೊಳ್ಳುವ ಪ್ರಸಂಗ ಬಂತು. ಹಾಗಾಗಿ ಈ ಒಂದು ನೈತಿಕವಾಗಿರುವ ಮೌಲ್ಯಗಳ ತೆಗೆ ಹೆಚ್ಚಿನ ವ್ಯವಸ್ಥೆ ಮಾಡಿಕೊಡುವುದು ಅಗತ್ಯ. ತಾವು ಒಂದು ಹಂತದಲ್ಲಿ ಹೇಳಿದ್ದೀರಿ. ಶಾಲೆ ಪಾಸಣೆ ಎಂದು. ಎರಡು ಸಲ, ಒಂದು ಡೀಟೈಲ್ಡ್ ತಪಾಸಣೆ, ಅನಂತರ ಇನ್ನೊಂದು ಸಲ ಕರ್ಸರಿ ನ್ಸ್ಪೆಕ್ಷನ್ ಮಾಡಬೇಕು ಎಂದು. ಇದು ನಡೆಯುತ್ತಿದೆಯೇ? ಇದು ನಡೆಯುವುದಕ್ಕೆ ಆಸ್ಪದ ಾಡಿಕೊಟ್ಟಿದ್ದೀರಾ? ಏನು ಮಾಡಿದ್ದೀರಿ ನೀವು ಅಧ್ಯಕ್ಷರೇ, ಅವರಿಗೆ ಕೊಡುತ್ತಿರುವ ಟಿಎ ಾದರಾಯನ ಕಾಲದ್ದು. 50 ರೂಪಾಯಿ ಟಿಎ ಇತ್ತು. ಈಗ ಅದನ್ನು ತೆಗೆದಿರಿ. ಎಲ್ಲವನ್ನೂ ತೆಗೆದು ಟ್ರಾವಲಿಂಗ್ ಅಲೋಯೆನ್ಸ್ ಇಲ್ಲದೆ ಪ್ರತಿ ತಿಂಗಳು ತಾವು ಕೊಡುವ ಪಗಾರದಲ್ಲಿ 500 ರಿಂದ 00 ರೂಪಾಯಿ ಕನಿಷ್ಠ ಖರ್ಚು ಮಾಡುವುದಕ್ಕೆ ಅವರು ತಯಾರು ಇದ್ದಾರೆಯೇ? ಇದನ್ನು ತೆಗೆದಿರಿ. ಪ್ರಾರಂಭ ಮಾಡಲಿಕ್ಕೆ ಏಕೆ ಎರಡು ವರ್ಷ? ಟಿಎ ಕೊಡಲಿಕ್ಕೆ ಏಕೆ ಎರಡು ವರ್ಷ ಅವಕಾಶ? ಈಗ ಕೆ ಕೊಡುತ್ತಿಲ್ಲ? ಟಿಎ ಕೊಟ್ಟು ಅವರಿಂದ ಕೆಲಸ ಮಾಡಿಸಿಕೊಳ್ಳಬೇಕೇ ಹೊರತು ನಿಮ್ಮ ಕಿಸೆಯಿಂದ ೀವು ಖರ್ಚು ಮಾಡಿ ಎಂದು ಹೇಳಿದರೆ ನೀವು ಬರೀ ಪುಸ್ತಕದಲ್ಲಿ ಬರೆಯುತ್ತೀರಿ ಹೊರತಾಗಿ ಅದು ಾರ್ಯಸಾಧನೆಯಾಗುವುದಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶಾಲಾ ಕೊಠಡಿ ನಿರ್ಮಾಣದ ಗ್ಗೆ ತಾವು ಗುರಿಯನ್ನು ಹಾಕಿರುತ್ತೀರಿ. ಆ ಗುರಿಗೆ ತಕ್ಕಂತೆ ಹಣವನ್ನು ಕೂಡ ನಿಮ್ಮದೇ ಆದ ರೀತಿಯಲ್ಲಿ ದಗಿಸುತ್ತೀರಿ. ನೀವೇನು ಹೇಳುತ್ತೀರಿ, ಒಂದು ಶಾಲೆಗೆ 55 ಸಾವಿರ ರೂಪಾಯಿ ಕೊಡುತ್ತೇವೆ, 85 ಾವಿರ ಖರ್ಚು ಬರುತ್ತದೆ. 30 ಸಾವಿರ ರೂಪಾಯಿ ಲೋಕಲ್ ಕಾಂಟ್ರಿಬ್ಯೂಷನ್ ಒಟ್ಟು ಮಾಡಿ, ಇಲ್ಲದಿದ್ದರೆ ಜಿಲ್ಲಾ ಪಂಚಾಯಿತಿ ಅಥವಾ ತಾಲ್ಲೂಕು ಪಂಚಾಯಿತಿಯಿಂದ ತೆಗೆದುಕೊಳ್ಳಿ ಎನ್ನುತ್ತೀರಿ. ಇದು ಸಾಧ್ಯವೇ? ನಮ್ಮ ಪ್ರಕಾಶ್‌ರವರು ಹೇಳಬೇಕು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯಿತಿಯವರು ಕೊಡುತ್ತಾರೆಯೇ ಎಂದು ಕೊಡುವುದಿಲ್ಲ. ಹಾಗಾಗಿ ಶಾಲೆಯ ಕನ್‌ಸ್ಟ್ರಕ್ಷನ್ ಏನಿದೆ, ಅದು ಕಳಪೆ ಮಟ್ಟದ್ದಾಗುತ್ತದೆ. ಅದರ ಆಯುಷ್ಯ ಕೇವಲ ಎರಡು ಮೂರು ವರ್ಷ ಮಾತ್ರ. ಬಿದ್ದುಹೋಗುತ್ತದೆ. ನೀವು ಕೊಟ್ಟಿರುವ 55 ಸಾವಿರ ರೂಪಾಯಿ ಕೂಡ ಮಣ್ಣಾಗಿ ಹೋಗಿಬಿಡುತ್ತದೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೇ, ಸರ್ಕಾರದಿಂದ ಶಿಕ್ಷಣ ಇಲಾಖೆಗೆ ಕೊಡುವ 40 ಸಾವಿರ ರೂಪಾಯಿಗಳ ಜೊತೆಗೆ ಪ್ರತಿ ಜಿಲ್ಲಾ ಪಂಚಾಯಿತಿಗಳಲ್ಲಿ ತಮ್ಮ ಜೆ.ಆರ್.ವೈ ಮತ್ತು ಇ.ಎ.ಎಸ್.ನಲ್ಲಿ ಆಯಾ ಅಗತ್ಯಕ್ಕೆ ಅನುಗುಣವಾದಂಥ ರೀತಿಯಲ್ಲಿ ಇಪ್ಪತ್ತು ಸಾವಿರ, ನಲವತ್ತು ಸಾವಿರ ರೂಪಾಯಿ ಈ ರೀತಿಯಲ್ಲಿ ಕೂಡ ಮಾಡುತ್ತಾರೆ. ನಮ್ಮಲ್ಲಿ 85 ಸಾವಿರದಿಂದ ಹಿಡಿದು 90 ಸಾವಿರ ರೂಪಾಯಿಗಳವರೆಗೆ ಒಂದು ಶಾಲಾ ಕೊಠಡಿ ಇದೆ. ಅದು ಗ್ರಾಮ ಪಂಚಾಯಿತಿ ಶೇಕಡ 80ರ ಅನುದಾನದಲ್ಲಿ ತೆಗೆದುಕೊಳ್ಳುತ್ತಾರೆ. ಇಲ್ಲದಿದ್ದರೆ ಇ.ಎ.ಎಸ್.ನಲ್ಲಿ ತೆಗೆದುಕೊಳ್ಳುತ್ತಾರೆ. ಜೆ.ಆರ್.ವೈ. ನಲ್ಲಿ ಜಿಲ್ಲಾಪಂಚಾಯಿತಿ ಶೇಕಡ 20ರ ಅನುದಾನದಲ್ಲಿ ತೆಗೆದುಕೊಳ್ಳುತ್ತಾರೆ. ಅದನ್ನು ಎಲ್ಲಾ ಕಡೆಗೂ ಕೂಡ ಕೊಡುತ್ತಾರೆ. ಪಟ್ಟಣ ಪ್ರದೇಶಗಳಲ್ಲಿಯೂ ಕೂಡ ಕೊಡುತ್ತಾರೆ. ನಿಮ್ಮಲ್ಲೇ ನಿಮ್ಮ ಜಿಲ್ಲಾ ಪಂಚಾಯಿತಿಯಲ್ಲಿ ಕೊಟ್ಟಿದ್ದಾರೆ.

ಡಾ|| ಎಂ. ಪಿ. ಕರ್ಕಿ : ಈ ರೀತಿ ಆಗಬಹುದೇನೋ. ಆದರೆ ಸಾರ್ವತ್ರಿಕವಾಗಿ ಆಗಿಲ್ಲ.

ಅಧ್ಯಕ್ಷರು : ನಾವೆಲ್ಲಾ ಮಾಡಿಸಿದ್ದೇವೆ. ನಮ್ಮಲ್ಲೆಲ್ಲ ಓಬಿಬಿ ಯಲ್ಲಿ ಬೇರೆ ಸ್ಕೀಮ್ ಎ ಇತ್ತಲ್ಲಾ, 55 ಸಾವಿರ ರೂಪಾಯಿಗಳಿಗೆ ಇವತ್ತಿನ ಪರಿಸ್ಥಿತಿಯಲ್ಲಿ ಆಗುವುದಿಲ್ಲ, ಯಾರೂ ಕಟ್ಟುವುದ ಮುಂದೆ ಬರುವುದಿಲ್ಲ ಎಂದು ಹೇಳಿ 85 ಸಾವಿರ ರೂಪಾಯಿ ಮಾಡಿಸಿದ್ದೇವೆ. ಮತ್ತೆ ನಾನು ನ ಸಂಸತ್ ಸದಸ್ಯರುಗಳಿಗೆ ರಿಕ್ವೆಸ್ಟ್ ಮಾಡಿಕೊಂಡೆ. ಒಂದು 30 ಬಿಲ್ಡಿಂಗ್‌ಗೆ 15 ಸಾವಿರ ರೂಪಾಯಿಗಳಂ ನಾಲ್ಕೂವರೆ ಲಕ್ಷ ರೂಪಾಯಿ ನೀವು ಕೊಡಿ. ಆ 85 ಸಾವಿರ ರೂಪಾಯಿಗೆ ನಿಮ್ಮ 15 ಸಾವಿ ರೂಪಾಯಿಗಳನ್ನೂ ಹಾಕಿ ಒಂದು ಲಕ್ಷ ರೂಪಾಯಿ ಮಾಡಿ ಕೆಲವು ದೊಡ್ಡ ದೊಡ್ಡ ರೂಮುಗಳನ ಕಟ್ಟೋಣ, ಪ್ರಯೋಗಾಲಯಗಳನ್ನು ಕೂಡ ಮಾಡುವುದಕ್ಕಾಗುತ್ತದೆ ಎಂದು ಹೇಳಿದ್ದೇನೆ. ಎಲ ಕಡೆಗೂ ಮಾಡುತ್ತಿದ್ದಾರೆ. ಅದು ನಿಮ್ಮ ಡಿಸ್ಕ್ರಿಷನ್.

ಡಾ|| ಎಂ. ಪಿ. ಕರ್ಕಿ : ಇದು ನಮ್ಮ ಜಿಲ್ಲೆಯಲ್ಲಿ ಆಗುತ್ತಿಲ್ಲ. ಏಕೆಂದರೆ ನಮ್ಮ ಜಿಲ್ಲೆಗೆ ಬರು ವರಮಾನ ಜಿಲ್ಲಾ ಪಂಚಾಯಿತಿಗೆ ಬರುವ ವರಮಾನ ತೀರಾ ಕಡಿಮೆ. ಅಲ್ಲಿರುವ ರೆವಿನ್ಯೂ ಲ್ಯಾಂಡ್ ಕಡಿಮೆ. ಹಾಗಾಗಿ ರೆವಿನ್ಯೂ ಬರುವುದು ಕಡಿಮೆ. ರೆವಿನ್ಯೂ ರೀಇಂಬರ್ಸ್ ಆಗುವುದರಿಂದ ಜಿಲ್ಲಾ ಪಂಚಾಯತಿಗೆ ಬರುವ ಹಣ ಕಡಿಮೆ. ಅದಲ್ಲದೆ ನಮ್ಮಲ್ಲಿ ಕೆಲಸಗಳು ಜಾಸ್ತಿ. ಗುಡ್ಡ, ನದಿ ,ಕೆರೆಗಳಿರುವುದರಿಂದ ಅನೇಕ ಕಡೆಗೆ ರಸ್ತೆಗಳು ಆಗುವ ಅವಶ್ಯಕತೆ ಇದೆ. ತಮ್ಮಲ್ಲಿ ಕೋಲಾ ಜಿಲ್ಲೆಯಾಗಲಿ, ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಒಂದು ಊರಿಗೆ ಹೋದರೆ ಒಂದು ರಸ್ತೆ ಸಾಕು. ನಮ್ಮಲ್ಲಿ 5 ರಿಂದ 10 ರಷ್ಟು ಮಾಡಬೇಕಾಗುತ್ತದೆ. ಒಂದೊಂದು ಮಜರಿಗಳು ಇರುತ್ತವೆ. ಅದರಿಂದ 5 ರಿಂದ 10 ರಸ್ತೆಗಳನ್ನು ಮಾಡಬೇಕಾಗುತ್ತದೆ. ಆ ರೀತಿ ಮಾಡಬೇಕಾದರೆ ಬ್ರಿಡ್ಜ್‌ಸ್‌ಗಳು ಬೇಕಾಗುತ್ತದೆ. ಹಾಗಾಗಿ ಮೂಲಭೂತ ಅವಶ್ಯಕತೆಗಳಿಗೆ ಜಿಲ್ಲಾ ಪಂಚಾಯಿತಿ ಖರ್ಚು ಮಾಡುತ್ತದೆಯೇ ಹೊರತಾಗಿ ಈ ಶಿಕ್ಷಣದ ಅವಶ್ಯಕತೆಗೆ ಕೊಡುತ್ತಿಲ್ಲ. ನಮ್ಮಲ್ಲಿ ಆಗುವ ಕಟ್ಟಡಗಳು ಕಳಪೆಮಟ್ಟದ್ದಾಗಿದೆ. ಅದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ ತಾವೇನು ನಿಗದಿ ಮಾಡುತ್ತೀರಿ, ಆ ನಿಗದಿ ಮಾಡುವ ಹಣ ಅಲ್ಲಿ ಎಷ್ಟು ಬೇಕೋ ಅಷ್ಟು ನಿಗದಿ ಮಾಡಿ. ಕಡಿಮೆಯಲ್ಲಿ ಶಾಲಾ ಕಟ್ಟಡ ಕಟ್ಟಿಸಿ. ತೊಂದರೆ ಇಲ್ಲ. ಕಟ್ಟಡ ಕಟ್ಟಿಸಿದ್ದಾದರೂ ಒಳ್ಳೆಯದಾಗಿ ಉಳಿಯುತ್ತದೆ. ಮತ್ತೆ ಈ ಸಾರಿ ಬಜೆಟ್‌ನಲ್ಲಿ ಬರೆದಿದ್ದೀರಿ. ಗ್ರಾಮಾಂತರ ಶಾಲೆಗಳಿಗೆ 55 ಸಾವಿರ ರೂಪಾಯಿ, ನಗರ ಪಟ್ಟಣ ಪ್ರದೇಶಗಳಲ್ಲಿ ಸಾಧಾರಣ 75 ಸಾವಿರ ರೂಪಾಯಿ ಕೊಡುತ್ತಿದ್ದೀರಿ. ಏಕೆ ಹೀಗೆ? ಗ್ರಾಮಾಂತರದಲ್ಲಿ ಕಡಿಮೆ ಖರ್ಚಿನಲ್ಲಿ ಕಟ್ಟಡವನ್ನು ಕಟ್ಟಲಾಗುತ್ತದೆಯೇ? ಪಟ್ಟಣಗಳಲ್ಲಿ ಜಾಸ್ತಿ ಖರ್ಚು ಬೇಕಾಗುತ್ತದೆಯೇ? ಏಕೆ ಈ ವ್ಯತ್ಯಾಸ? ಪಟ್ಟಣ ಪ್ರದೇಶದಲ್ಲಿ 75 ಸಾವಿರ ರೂಪಾಯಿ ಹೆಚ್ಚು ಕಡಿಮೆ ಬರುತ್ತದೆ. ನಾನು ಲೆಕ್ಕಹಾಕಿ ನೋಡಿದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಮಟ್ಟದಲ್ಲಿ ಸ್ನೇಹಿತರಾಗಿರತಕ್ಕಂಥ ಶ್ರೀ ಎಂ. ಪಿ. ಪ್ರಕಾಶ್‌ರವರು ಹೇಳಿರುವಂತೆ ನಾವು ಏನು ಹಣವನ್ನು ನಮ್ಮ ಸರ್ಕಾರದಿಂದ ಕೊಡುತ್ತಿದ್ದೇವೆ ಇದಕ್ಕೆ ಕಡಿಮೆಯಾದಂಥ ಹಣವನ್ನು ಕೇಂದ್ರದಿಂದ ಬರತಕ್ಕಂಥ ಇಎಎಸ್ ಮತ್ತು ಜೆಆರ್‌ವೈ ಯೋಜನೆಗಳಡಿಯಲ್ಲಿ ಕೊಟ್ಟು ಕಟ್ಟಡಗಳನ್ನು ಕಟ್ಟಿಸುತ್ತಾರೆ. ಈಗ

ಅರ್ಬನ್ ಏರಿಯಾದಲ್ಲಿ ಜನರು ಮುಂದೆ ಬರುವುದಿಲ್ಲ. ನಾವು ಏನು ಹಣ ಕೊಡುತ್ತಿದ್ದೇವೆ ಅದರಿಂದ ಸಂಪೂರ್ಣವಾಗಿ ಕಟ್ಟಡ ಕಟ್ಟುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಇನ್ನೂ ಸ್ವಲ್ಪ ಜಾಸ್ತಿ ಹಣವನ್ನು ಇಡತಕ್ಕಂಥದ್ದು ಒಳ್ಳೆಯದು ಎನ್ನುವ ಉದ್ದೇಶದಿಂದ ಮಾತ್ರ ಇಟ್ಟಿರತಕ್ಕಂಥದ್ದು. ಬೇರೆ ಯಾವುದೇ ಕಾರಣದಿಂದ ಅಲ್ಲ.

ಶ್ರೀ ಡಿ.ಆರ್. ಪಾಟೀಲ್ : ಪ್ರೈಮರಿ ಸ್ಕೂಲ್ ಬಿಲ್ಡಿಂಗ್‌ಗಳಿಗೆ ತಾವು ಇಎಸ್ ಮತ್ತು ಜೆಆರ್‌ವೈ ಫಂಡ್‌ನಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಉಪಯೋಗ ಮಾಡುವುದಕ್ಕೆ ಹೇಳುತ್ತೇವೆ. ಜೆಆರ್‌ವೈ ಫಂಡ್ ಇರುವುದು ಗ್ರಾಮೀಣ ಪ್ರದೇಶಗಳಲ್ಲಿ ಯಾವ ಯುವಕರಿಗೆ ಉದ್ಯೋಗ ಇಲ್ಲ, ಅವರಿಗೆ ಉದ್ಯೋಗ ಕೊಡಲಿಕ್ಕೆ ಎಂಬುದು ನಮಗೂ ನಿಮಗೂ ಗೊತ್ತಿದೆ. ಅಸೆಟ್ ಕ್ರಿಯೇಷನ್‌ಗೆ ಇದರಿಂದ ಅನುಕೂಲ ಇದೆ. ಆದರೆ ಅದು ಏತಕ್ಕೆ ಉಪಯೋಗ ಆಗುತ್ತದೆ ಎಂದರೆ ಕಂಟ್ರಾಕ್ಟ್‌ರ್‌ಗೆ ಕೊಟ್ಟು ಎಲ್ಲಾ ಎಕ್ವಿಪ್‌ಮೆಂಟ್ಸ್‌ಗಳನ್ನೂ ಉಪಯೋಗ ಮಾಡಿಕೊಂಡು ನಾವು ಮಾಡುತ್ತೇವೆ, ಇದೇ ಒಂದು ಘನ ಉದ್ದೇಶ ನಗರ ಪ್ರದೇಶಗಳಲ್ಲೂ ಆಗ ಬೇಕಾದರೆ ನೀವು ಗ್ರಾಮೀಣ ಮಂದಿಯನ್ನು ಅಲ್ಲಿ ದುಡಿಯಲಿಕ್ಕೆ ತೆಗೆದುಕೊಳ್ಳಿ ಎಂದು ಹೇಳಿ ಗೈಡ್‌ಲೈನ್‌ನಲ್ಲಿ ಹೇಳಿ. ಆದರೆ ಅದು ಬೇರೆ ರೀತಿಯಲ್ಲಿ ಆಗುತ್ತಿದೆ. ಅಲ್ಲಿ ಪ್ರಮೈರಿ ಸ್ಕೂಲ್ ಬಿಲ್ಡಿಂಗ್ ಸಾಕಷ್ಟು ಪ್ರಮಾಣದಲ್ಲಿ ಆಗುತ್ತದೆ. ಇಲ್ಲದಿದ್ದರೆ ನೀವು ಜೆಆರ್‌ವೈ, ಇಎಎಸ್ ಫಂಡ್‌ಗಳನ್ನು ನಗರಪ್ರದೇಶಗಳಿಗೆ ಕೊಡಲಿಲ್ಲ ಎಂದರೆ ಬಹಳಷ್ಟು ಹಣವನ್ನು ಬಜೆಟ್‌ನಲ್ಲಿ ಇಡುವುದಕ್ಕೆ ನೀವು ಅವಕಾಶ ಕೊಡಬೇಕು.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಸನ್ಮಾನ್ಯ ಅಧ್ಯಕ್ಷರೆ, ಒಂದು ವರ್ಷ ಪೂರ್ಣ ಪ್ರಮಾಣದಲ್ಲಿ ತಾವು ಶಾಲಾ ಕಟ್ಟಡ ಕಟ್ಟುವುದನ್ನು ನಿಲ್ಲಿಸಿ ಈಗಿರತಕ್ಕಂಥ ಕಟ್ಟಡಗಳನ್ನು ಒಂದೊಂದು ಕ್ಷೇತ್ರಕ್ಕೆ 50 ರಿಂದ 60 ಲಕ್ಷ ರೂಪಾಯಿ ರಿಪೇರಿಗೆ ಬೇಕಾಗಿದೆ. ಇವೊತ್ತು ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರು ಮತ್ತು ಮಕ್ಕಳೊಂದಿಗೆ ಹೊರಗಡೆ ಕುಳಿತುಕೊಂಡು ಪಾಠ ಮಾಡುತ್ತಿದ್ದಾರೆ. ಇಲ್ಲದಿದ್ದರೆ ಹೆಲ್ಮೆಟ್ ಹಾಕಿಕೊಂಡು ಕುಳಿತುಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ ಒಂದು ವರ್ಷ ಹೊಸದಾಗಿ ಕಟ್ಟಡ ಕಟ್ಟುವುದನ್ನು ಪೂರ್ಣವಾಗಿ ನಿಲ್ಲಿಸಿಬಿಡಿ. ಎಲ್ಲಾ ಶಾಲೆಗಳನ್ನೂ ರಿಪೇರಿ ಮಾಡಿ ಸುಣ್ಣಬಣ್ಣ ಹಚ್ಚಿಸತಕ್ಕಂಥ ಕೆಲಸವನ್ನಾದರೂ ಮಾಡಿದರೆ ಕನಿಷ್ಠ 50ನೇ ಸ್ವಾತಂತ್ರೋತ್ಸವಕ್ಕಾದರೂ ಶಾಲಾ ಕಟ್ಟಡಗಳು ಸುಣ್ಣಬಣ್ಣ ಕಾಣುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಹೆಚ್.ಜಿ. ಗೋವಿಂದೇಗೌಡ : ಈ ವರ್ಷದ ಬಜೆಟ್‌ನಲ್ಲಿ ಹೊಸ ಕಟ್ಟಡಗಳ ನಿರ್ಮಾಣಕ್ಕೆ ಹಣ ಕಡಿಮೆ ಒದಗಿಸಿ ರಿಪೇರಿಗಳಿಗೆ ಹಣ ಹೆಚ್ಚು ಒದಗಿಸುವ ವ್ಯವಸ್ಥೆ ಮಾಡಿದ್ದೇವೆ.

ಅಧ್ಯಕ್ಷರು : ರಿಪೇರಿಗಳಿಗೆ ಹಣ ಒದಗಿಸುವಾಗ ಯಾವ ಕಟ್ಟಡಕ್ಕೆ ರಿಪೇರಿ ಆಗತಕ್ಕದ್ದು ಎಂಬುದನ್ನು ನಿರ್ಧರಿಸಬೇಕು. ಸುಮಾರು 15, 20 ವರ್ಷದ ಕೆಳಗೆ ಕಟ್ಟಿರತಕ್ಕಂಥ ಬಿಲ್ಡಿಂಗ್ ಅಥವಾ 10 ವರ್ಷದ ಕೆಳಗೆ ಕಟ್ಟಿರತಕ್ಕಂಥ ಬಿಲ್ಡಿಂಗ್‌ಗಳು ರಿಪೇರಿಗೆ ಬಂದಿದ್ದರೆ ಆ ರಿಪೇರಿಗೆ ಹಣ ಇಡತಕ್ಕಂಥದ್ದು ಪರವಾಗಿಲ್ಲ. ಆದರೆ ಕಳೆದ ವರ್ಷ ಬಿಲ್ಡಿಂಗ್ ಕಟ್ಟಿ ಈ ವರ್ಷ ರಿಪೇರಿಗೆ ಹಣ ಎಂದರೆ ಅದು ಎಲ್ಲೋ ಸ್ವಲ್ಪ ಆ ಕಡೆಗೆ ವಿವೇಚನೆ ಉಪಯೋಗಿಸಿ ಅಂಥದ್ದನ್ನು ಪಟ್ಟಿ ಮಾಡಿ ಆ

ಮಹಾನುಭಾವರು ಎರಡು ಮೂರು ವರ್ಷದಲ್ಲಿ ಕಟ್ಟಿದ ಬಿಲ್ಡಿಂಗ್ ರಿಪೇರಿಗೆ ಬರುವುದಕ್ಕೆ ಸಹಾಯ ಮಾಡಿದವರು ಎಂದು ಹೇಳಿ ಅದಕ್ಕೆ ಬೇರೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಎನ್. ಯೋಗಿಶ್ ಭಟ್ : ನಗರ ಪ್ರದೇಶಗಳಲ್ಲಿ ಅಥವಾ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲಾಕಟ್ಟಡಗಳನ್ನು ಕಟ್ಟುವಾಗ ಏನು ಎಸ್ಟಿಮೇಟ್ ಮಾಡುತ್ತಾರೆ ಆ ಎಸ್ಟಿಮೇಟ್ ಕಾಪಿಯನ್ನು ಸಂಬಂಧಪಟ್ಟ ಹೆಡ್‌ಮಾಸ್ಟರ್ ಅಥವಾ ಅಲ್ಲಿಯ ಬೆಟರ್‌ಮೆಂಟ್ ಕಮಿಟಿಯ ಅಧ್ಯಕ್ಷರಿಗೆ ಕೊಡತಕ್ಕಂಥ ವ್ಯವಸ್ಥೆಯಾಗಬೇಕು. ಮತ್ತು ಅದು ಕಂಪ್ಲೀಟ್ ಆದನಂತರ ಆ ಸ್ಪೆಸಿಫಿಕೇಷನ್ ಪ್ರಕಾರ ಆಗಿದೆಯೇ ಅಥವಾ ಇಲ್ಲವೋ ಎಂಬುದಕ್ಕೆ ಕಂಪ್ಲಿಷನ್ ರಿಪೋರ್ಟ್ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆಯಾಗಬೇಕು. ಈ ಎರಡೂ ಕೆಲಸಗಳೂ ಆಗುತ್ತಿಲ್ಲ. ಕೆಲವು ಸಂದರ್ಭಗಳಲ್ಲಿ ಇದು ನನ್ನ ಗಮನಕ್ಕೆ ಬಂದಿದೆ. ಅಧಿಕಾರಿಗಳ ಮನೆಯನ್ನು ರಿಪೇರಿ ಮಾಡಿ ಅದಕ್ಕೆ ಪರಿಹಾರವಾಗಿ ಅಧಿಕಾರಿಗಳು ಎರಡು ಮೂರು ಶಾಲೆಗಳನ್ನು ದುರಸ್ಥಿ ಪಡಿಸಿಕೊಡುತ್ತೇನೆ ಎಂದು ಹೇಳಿದ್ದಾರೆ. ಅಂದರೆ ಇಲ್ಲಿ ಏನು ರಿಪೇರಿ ಮಾಡಿದ್ದಾರೆ ಅದರ ಕಾಂಪೆನ್‌ಸೇಷನ್ ಅಲ್ಲಿ ತಿಂದುಹಾಕಿದ್ದಾರೆ ಎನ್ನುವ ಮಾತು ಕೇಳಿಬರುತ್ತಿದೆ. ಆದುದರಿಂದ ಕಂಪ್ಲೀಷನ್ ರಿಪೋರ್ಟಿನ ಎಸ್ಟಿಮೇಟ್ ಕಾಪಿಯನ್ನು ಕಡ್ಡಾಯವಾಗಿ ಸಂಬಂಧಪಟ್ಟ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಗೆ ಕೊಡಬೇಕು. ಕಂಪ್ಲೀಷನ್ ಆದ ನಂತರ ಆ ಕಂಪ್ಲೀಷನ್ ರಿಪೋರ್ಟ್‌ನ್ನು ಸ್ಪೆಸಿಫಿಕೇಷನ್ ಪ್ರಕಾರ ಆಗಿದೆಯೇ ಇಲ್ಲವೇ ಎಂಬುದನ್ನು ವೆರಿಫೈ ಮಾಡಿಕೊಂಡು ಸಹಿ ಮಾಡಿ ಅದನ್ನು ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಅಥವಾ ಬೆಟರ್‌ಮೆಂಟ್ ಕಮಿಟಿ ಅಧ್ಯಕ್ಷರಿಗೆ ಸಲ್ಲಿಸಬೇಕು. ಇಲ್ಲದಿದ್ದರೆ ಅದಕ್ಕೆ ಬಿಲ್ಲನ್ನು ಪಾಸ್ ಮಾಡಬಾರದು ಎಂಬ ಒಂದು ಕಟ್ಟುನಿಟ್ಟಿನ ಆದೇಶ ಹೊರಡಿಸಿದರೆ ಮಾತ್ರ ಏನಾದರೂ ಲಾಭ ಆಗಬಹುದು.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ಈ ಪಿ.ಯು.ಸಿ. ಬೋರ್ಡ್ ಏನಿದೆ ಇದು ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ 10 : 2 :3 ಶಿಕ್ಷಣ ಕ್ರಮವಾಗಿದೆ. ಈ 10 ಪ್ರಾಥಮಿಕ ಶಿಕ್ಷಣ, 3 ಯೂನಿವರ್ಸಿಟಿ ಶಿಕ್ಷಣವಾದರೆ ಅದಕ್ಕೆ ಪೂರಕವಾಗಿ 2 ವರ್ಷದ ಶಿಕ್ಷಣ ಎಂದು ನಮ್ಮ ರಾಜ್ಯದಲ್ಲಿ ಒಂದು ಪಿಯುಸಿ ಬೋರ್ಡ್ ಇದೆ. ನಾನು 2 ವರ್ಷಗಳ ಹಿಂದೆ ಮಹಾರಾಷ್ಟ್ರಕ್ಕೆ ಹೋದಾಗ ಅಲ್ಲಿ ವಿಚಾರ ಮಾಡಿದಾಗ ಅಲ್ಲಿ ಪಿಯುಸಿ ಬೋರ್ಡ್ ಇಲ್ಲ ಎಂದು ತಿಳಿದು ಬಂತು. ಅನೇಕ ರಾಜ್ಯಗಳಲ್ಲಿ ಪಿಯುಸಿ ಬೋರ್ಡ್ ಇಲ್ಲ. ಇಲ್ಲಿ ಪಿಯುಸಿ ಬೋರ್ಡ್ ಏತಕ್ಕೆ ಸೃಷ್ಠಿಯಾಯಿತು ಎಂದು ನಾನು ಕೇಳುತ್ತೇನೆ. ಶಿಕ್ಷಣದಲ್ಲಿ ಕಂಟಿನ್ಯುಟಿ ಇರಬೇಕಾಗತ್ತದೆ. ಹೈಸ್ಕೂಲು ಶಿಕ್ಷಣ, ಪಿಯುಸಿ ಶಿಕ್ಷಣ ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಈ ಪಿಯುಸಿ ಬೋರ್ಡ್ ಪೂರಕವಾಗಿದೆಯೇ? ಈ ಪಿಯುಸಿ ಬೋರ್ಡ್‌ನ್ನು ತೆಗೆದುಹಾಕಿ ಪಿಯುಸಿ ಬೋರ್ಡ್‌ನಲ್ಲಿ ನಡೆಯುತ್ತಿರುವ ಕೆಲಸಗಳನ್ನು ಮಹಾರಾಷ್ಟ್ರದಲ್ಲಿ ಎಸ್‌ಎಸ್‌ಎಲ್‌ಸಿ ಬೋರ್ಡ್‌ನಲ್ಲಿ 10 + 2 ವಿದ್ಯಾಭ್ಯಾಸ ಕ್ರಮವಿದ್ದು ಅದೇ ಎರಡನ್ನೂ ನೋಡಿಕೊಳ್ಳುತ್ತದೆ. ಆ ರೀತಿಯಾಗಿರತಕ್ಕಂಥ ಒಂದು ಕ್ರಮವನ್ನು ಏತಕ್ಕೆ ಅಳವಡಿಸಬಾರದು? ಇಲ್ಲದಿದ್ದರೆ ಏನಾಗುತ್ತದೆ ಎಂದರೆ ಎಸ್‌ಎಸ್‌ಎಲ್‌ಸಿ ಸಿಲಬಸ್ ಅಂದರೆ ಎಸ್‌ಎಸ್‌ಎಲ್‌ಸಿಯಲ್ಲಿ ಏನು ಕಲಿಯಬೇಕು, ಕಲಿಸಬೇಕು ಎಂದು ನಿಶ್ಚಯ ಮಾಡತಕ್ಕಂಥದ್ದು ಆ ಬೋರ್ಡ್‌ಗೆ ಸಂಬಂಧಪಟ್ಟ

ಕಮಿಷನರ್ ಕೈಯಲ್ಲಿರುತ್ತದೆ. ತಾವು ಪಿಯುಸಿ ಬೋರ್ಡ್ ಎಂದು ಸ್ವತಂತ್ರವಾದ ಸಂಸ್ಥೆಯನ್ನು ಹುಟ್ಟುಹಾಕಿದ್ದೀರಿ. ಅದರ ನಂತರ ಬರುವ ವಿಶ್ವವಿದ್ಯಾನಿಲಯ ಎಂಬ ಸ್ವಾಯತ್ತ ಸಂಸ್ಥೆ ಬರುತ್ತದೆ. ಉದಾಹರಣೆಗೆ ಎಸ್‌ಎಸ್‌ಎಲ್‌ಸಿಯಲ್ಲಿ ಸಂಸ್ಕೃತ ಭಾಷೆ ಕಲಿಯುವುದಕ್ಕೆ ಬರುತ್ತದೆ, ಡಿಗ್ರಿಯಲ್ಲಿ ಕೂಡ ಸಂಸ್ಕೃತವನ್ನು ಕಲಿಯುವುದಕ್ಕೆ ಬರುತ್ತದೆ ಆದರೆ ಪಿಯುಸಿ ಬೋರ್ಡ್‌ನಲ್ಲಿ ಎರಡು ಗ್ರೂಪ್‌ನಲ್ಲಿ ಸಂಸ್ಕೃತ ಕಲಿಯುವುದಕ್ಕೆ ಅವಕಾಶ ಇಲ್ಲ. ಇದನ್ನು ವಿಚಾರಿಸಿದರೆ ಪಾಲಿಸಿ ಮಾಡಿದವರನ್ನು ಕೇಳಬೇಕು ಎನ್ನುತ್ತಾರೆ. ಹಾಗಾದರೆ ಪಾಲಿಸಿ ಮಾಡಿದವರು ಯಾರು? ಪಿಯುಸಿ ಬೋರ್ಡ್‌ನ ಅಧ್ಯಕ್ಷರೇ ಅಥವಾ ಪಿಯುಸಿ ಬೋರ್ಡ್‌ನ ಡೈರೆಕ್ಟರೆ? ಯಾರು ಮಾಡಿದರು ಇದನ್ನು ಏತಕ್ಕಾಗಿ ಮಾಡಿದರು? ಅದು ತಮ್ಮ ಪಾಲಿಸಿ ಎಂದು ಹೇಳುತ್ತೀರಿ. Directives on the National Policy of Education ಎಂದು ಹೇಳುತ್ತೀರಿ. The efforts will imply the development of facilities for the intensive study of Sanskrit and other classical languages. ಅದಕ್ಕೆ ವಿರುದ್ಧವಾಗಿ ಸಂಸ್ಕೃತವನ್ನು 2ನೇ ಐಚ್ಛಿಕ ಭಾಷೆಯಾಗಿ ಕಲಿತುಕೊಳ್ಳುವುದಕ್ಕೆ ಅವಕಾಶ ಇಲ್ಲ. ಏತಕ್ಕಾಗಿ ಇಲ್ಲ? 1972ರಲ್ಲಿ ಪ್ರಾರಂಭವಾಗಿರತಕ್ಕಂಥ ವಿದ್ಯಾಲಯಗಳಲ್ಲಿ ಸಂಸ್ಕೃತ ಕಲಿಸುತ್ತಿದ್ದಾರೆ. ಅಲ್ಲಿ ಸಂಸ್ಕೃತ ಶಿಕ್ಷಕರಿದ್ದಾರೆ. ತದನಂತರದಲ್ಲಿ 1986ರಲ್ಲಿ ತನಿಖೆ ಆದಾಗ ಅದುನ್ನು ಮುಂದುವರೆಸಿಕೊಂಡು ಹೋಗುವುದಕ್ಕೆ ಅವಕಾಶ ಕೊಟ್ಟಿಲ್ಲ ಎಂದು ಹೇಳಿದ್ದಾರೆ. ಒಮ್ಮೆಲೆ ಈ ವರ್ಷ ಸಂಸ್ಕೃತ ಐಚ್ಛಿಕ ವಿಷಯವಾಗಿ ಕಲಿಸಬಾರದು, ನೀವು ಕಲಿಸಿದರೆ ನಿಮಗೆ ಸಹಾಯಧನ ಸಿಗುವುದಿಲ್ಲ, ಪರೀಕ್ಷೆಗಳಿಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ ಎನ್ನುವ ಸುತ್ತೋಲೆಯನ್ನು ಏತಕ್ಕೆ ಹೊರಡಿಸಿದಿರಿ? ಇದರಲ್ಲಿ ಕಂಟಿನ್ಯುಯಿಟಿ ಇದೆಯೇ? ಈ ಬೋರ್ಡ್ ತನ್ನಷ್ಟಕ್ಕೆ ತಾನೇ ನಿರ್ಧಾರವನ್ನು ತೆಗೆದುಕೊಳ್ಳತಕ್ಕಂಥ ಹಿನ್ನೆಲೆಯಲ್ಲಿ ಈ ರೀತಿ ಆಗಿರತಕ್ಕಂಥ ಗೊಂದಲ ನಿರ್ಮಾಣವಾಗಿದೆ. ಅಧ್ಯಕ್ಷರೇ, ಪಿಯುಸಿ ಸಂಯುಕ್ತ ಪದವಿ ಕಾಲೇಜುಗಳಲ್ಲಿ ಪಿಯುಸಿಗೆ ಪ್ರವೇಶ ಕೊಡಬಾರದು ಎಂದು ಹೇಳತಕ್ಕಂಥ ಒಂದು ಪರಿಪತ್ರ ಹೊರಡಿಸಿತು. ಪಿಯುಸಿ ಹುಡುಗರಿಗೆ ಅಲ್ಲಿ ಅಡ್ಮೀಷನ್ ಕೊಡಬಾರದು ಎಂದು ಹೇಳಿದರು. ಕಾರವಾರದಲ್ಲಿ ಪಿಯುಸಿ ಕಾಲೇಜು ಇಲ್ಲ, ಸ್ವತಂತ್ರವಾದ ಪಿಯುಸಿ ಇಲ್ಲ. ಅಲ್ಲಿ 10+2 ಇಲ್ಲ. ಹೀಗಾಗಿ ಅವರು ಬಹಳ ಗಡಿಬಿಡಿಯಾದರು. 15 ದಿವಸ ಇದೇ ರೀತಿ ನಡೆಯಿತು. ಕಡೆಗೆ ಸರ್ಕಾರ ಆ ಸುತ್ತೋಲೆಯನ್ನು ಹಿಂದಕ್ಕೆ ತೆಗೆದುಕೊಳ್ಳತಕ್ಕಂಥ ಪ್ರಮೇಯ ಬಂತು. ಈ ರೀತಿಯಾಗಿ ಮುಂದಾಲೋಚನೆ ಇಲ್ಲದೆ ಪರಿಪತ್ರ ಹೊರಡಿಸತಕ್ಕಂಥ ಒಂದು ಇಲಾಖೆ ನಮಗೆ ಅಗತ್ಯವೇ? ಇದು ಏತಕ್ಕಾಗಿ ಬೇಕು ಎನ್ನತಕ್ಕಂಥದ್ದನ್ನು ನಾವು ವಿಚಾರ ಮಾಡಬೇಕಾಗಿದೆ. ಪದವಿಪೂರ್ವ ಕಾಲೇಜುಗಳಲ್ಲಿ ನಮ್ಮಲ್ಲಿ 3 ರೀತಿ ಕಾಲೇಜುಗಳಿವೆ. ಪ್ರೌಢಶಿಕ್ಷಣದೊಂದಿಗೆ ಪದವಿಪೂರ್ವ ಕಾಲೇಜು, ಪದವಿಪೂರ್ವ ಕಾಲೇಜು ಹಾಗು ಕಾಂಪೋಸಿಟ್ ಡಿಗ್ರಿ ಕಾಲೇಜು, ಈ ಮೂರು ರೀತಿಯ ಕಾಲೇಜುಗಳನ್ನು ಏತಕ್ಕೆ ಸೃಷ್ಟಿ ಮಾಡಲಾಯಿತು? ಅದನ್ನು ಯಾರು ಅಡ್ಮಿನಿಸ್ಟ್ರೇಷನ್ ಮಾಡುತ್ತಾರೆ? ಮೊದಲು ಕಾಲೇಜು ಶಿಕ್ಷಣವನ್ನು ಯೂನಿವರ್ಸಿಟಿ ಅಡ್ಮಿನಿಸ್ಟ್ರೇಷನ್ ಮಾಡುತ್ತಿತ್ತು. ಈಗ ಯೂನಿವರ್ಸಿಟಿ ತೆಗೆದು ಪಿಯುಸಿ ಬೋರ್ಡ್‌ಗೆ ಕೊಟ್ಟಿದೆ. ಪದವಿ ಕಾಲೇಜುಗಳಲ್ಲಿ ಇರತಕ್ಕಂಥ ಒಂದು ವ್ಯವಸ್ಥೆಯನ್ನು ಮೂರು ವರ್ಷ ವಿಶ್ವವಿದ್ಯಾನಿಲಯ ತೆಗೆದುಕೊಳ್ಳುತ್ತದೆ. 2 ವರ್ಷವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ ನೋಡಿಕೊಳ್ಳಬೇಕು. ಈ

ಪದವಿಪೂರ್ವ ಕಾಲೇಜುಗಳು ಹೇಗೆ ಹುಟ್ಟಿವೆ ಎಂದರೆ ರಾಜಕೀಯ ಇಚ್ಚೆಗೆ ಅನುಗುಣವಾಗಿ ಈ ಕಾಲೇಜುಗಳನ್ನು ಸ್ಥಾಪನೆ ಮಾಡಿರತಕ್ಕಂಥದ್ದು ಇದೆ. ಕೆಲವು ಕಾಲೇಜುಗಳಿಲ್ಲಿ ವಿದ್ಯಾರ್ಥಿಗಳೇ ಇಲ್ಲ ಶಿಕ್ಷಕರಿದ್ದಾರೆ. ಕಾಮರ್ಸ್ ಇರತಕ್ಕಂಥ ಒಂದು ಕಾಲೇಜಿನಲ್ಲಿ ಒಬ್ಬರೂ ವಿದ್ಯಾರ್ಥಿಗಳಿಲ್ಲ, ಶಿಕ್ಷಕರಿದ್ದಾರೆ. ಶಿಕ್ಷಕರಿಗೆ ಪಗಾರ ಕೊಡುತ್ತಿದ್ದೇವೆ. ಅದೇ ರೀತಿಯಲ್ಲಿ 15-20 ವಿದ್ಯಾರ್ಥಿಗಳಿರತಕ್ಕಂಥ ಕಾಲೇಜುಗಳಿವೆ. ಸ್ವತಂತ್ರವಾಗಿರತಕ್ಕಂಥ ಪಿಯುಸಿ ಕಾಲೇಜಿನಲ್ಲಿ 6 ಮಂದಿ ಶಿಕ್ಷಕರನ್ನು ಕೊಡುತ್ತೀರಿ. ಇದು ಸರ್ಕಾರದ ಮೇಲೆ ದೊಡ್ಡ ಹೊರೆ ಅಲ್ಲವೇ? ತಾವು ಮಂತ್ರಿಗಳಾಗಿರತಕ್ಕಂಥವರು ಈ ಕಾಲೇಜುಗಳಲ್ಲಿ ಅರ್ಧದಷ್ಟು ಕಾಲೇಜುಗಳನ್ನು ಮುಚ್ಚಬೇಕು. ಅನಾವಶ್ಯಕವಾಗಿರತಕ್ಕಂಥ ಕಾಲೇಜುಗಳು ಕೆಲವಾದರೆ ಪ್ರತಿಷ್ಠೆಗಾಗಿ ಕೊಟ್ಟಿರತಕ್ಕಂಥ ಕಾಲೇಜುಗಳು ಹಲವು. ವಿದ್ಯಾ ಇಲಾಖೆಯಲ್ಲಿ ಈ ಪ್ರತಿಷ್ಠೆ ಪ್ರಶ್ನೆ ಬರಬಾರದು. That is the last thing that education can brook. ಹಾಗಾಗಿ ನಾನು ಇದ್ದಹಾಗೆ ಒಂದು ಜೂನಿಯರ್ ಕಾಲೇಜಾಗಬೇಕು ಎಂಬ ಪ್ರತಿಷ್ಠೆಗೆ ಮಣಿದು ನಾವು ಕಾಲೇಜುಗಳನ್ನು ಕೊಟ್ಟರೆ ಶಿಕ್ಷಣದ ಮಟ್ಟ ಹಾಳಾಗುತ್ತದೆ. ಎರಡೂ ಶಾಲಾ ಕಾಲೇಜುಗಳು ಸಿಕ್ ಆಗುತ್ತವೆ. ಸರ್ಕಾರದ ಮೇಲೆ ದೊಡ್ಡ ಹೊರೆ ಬೀಳುತ್ತದೆ. ಈ ಕಾಲೇಜುಗಳನ್ನು ಬಂದ್ ಮಾಡಿದರೆ ಎಲ್ಲಿ ಶಿಕ್ಷಕರಿಲ್ಲ ಅಲ್ಲಿ ಶಿಕ್ಷಕರನ್ನು ನೇಮಿಸುವುದಕ್ಕೆ ಹಣ ಸಿಗುತ್ತದೆ ; ಎಲ್ಲಿ ಕ್ಲಾಸ್ -4 ಸರ್ವೆಂಟ್ಸ್ ಇಲ್ಲ ಅಲ್ಲಿ ಕ್ಲಾಸ್-4 ಸರ್ವೆಂಟ್ಸ್‌ಗಳನ್ನು ನೇಮಿಸುವುದಕ್ಕೆ ಅವಕಾಶ ಸಿಗುತ್ತದೆ. ಅದಕ್ಕಾಗಿ ಇದನ್ನು ಒಂದು ಸಲ ಸರಿಯಾದ ರೀತಿಯಲ್ಲಿ ಪುನರಾಲೋಚಿಸಬೇಕು. ಯಾವುದೇ ಒತ್ತಡಕ್ಕೆ ಒಳಗಾಗದೆ ಯಾವ ಕಾಲೇಜುಗಳಲ್ಲಿ ಸರಿಯಾಗಿ ಕಲಿಸುತ್ತಿಲ್ಲ ಯಾವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕೆ ಸಾಧ್ಯ ಇಲ್ಲ, ಅಂತಹ ಕಾಲೇಜುಗಳನ್ನು ಕೂಡಲೇ ನಿಲ್ಲಿಸತಕ್ಕಂಥ ಪ್ರಯತ್ನ ಮಾಡಬೇಕು. ಆ ಪ್ರಯತ್ನ ಶ್ರೀ ಗೋವಿಂದೇಗೌಡರಿಂದಲೂ ಸಹ ಸಾಧ್ಯವಾಗುತ್ತಿಲ್ಲ. ಇದು ನನಗೆ ಬಹಳ ವಿಷಾದ ಎನಿಸುತ್ತದೆ. when you are in the position you will have to take that decision.

11.20 ಎ.ಎಂ

ಅಧ್ಯಕ್ಷರು : ಹೋದ ಸಾರಿ ಈ ನಿರ್ಬಂಧದ ಬಗ್ಗೆ ಮಾನ್ಯ ಕುಂಬ್ಳೆ ಸುಂದರ್ ರಾವ್ ಅವರು ಒಂದು ಪ್ರಶ್ನೆ ಕೇಳಿದ್ದರು. ಬಹಳ ಕಡಿಮೆ ಇರತಕ್ಕ ಹೈಸ್ಕೂಲಿನಿಂದ ಶಿಕ್ಷಕರನ್ನು ಹೆಚ್ಚಾಗಿ ಶಿಕ್ಷಕರು ಇಲ್ಲದ ಕಡೆ ವರ್ಗಾವಣೆ ಮಾಡುವ ವಿಚಾರ ಹೇಳಿದರು. ಹಾಗಾದರೆ ನನ್ನ ಕ್ಷೇತ್ರಕ್ಕೆ ವರ್ಗಾಯಿಸುವಂತಹ ಬಹಳ ಆದ್ಯತೆ ಇದೆ ಎಂದು ಹೇಳಿದಾಗ ಮಾನ್ಯ ಗೋವಿಂದೇ ಗೌಡರೂ ಒಪ್ಪಿಕೊಂಡು ಕೊಡುತ್ತೇವೆಂದರು. ಆಮೇಲೆ ಮಾನ್ಯ ಸುಂದರ್ ರಾವ್ ಅವರು ಬಂದು ಒಂದೇ ಜನ ಗಂಟು ಬಿದ್ದಿದ್ದಾರೆ. ಅದು ಶಾಲೆ ನಡೆಯಲಿ ಬಿಡಲಿ, ನಮ್ಮ ಶಾಲೆಯ ವರ್ಗಾವಣೆ ಆಗಲಿಕ್ಕೆ ಬಿಡಕೂಡದು, ಅಲ್ಲಿಯೇ ಶಿಕ್ಷಕರು ಇರಬೇಕು ಎಂದು ಹೇಳುತ್ತೇನೆಂದು ಹೇಳಿದರು. ಈ ನಿರ್ಬಂಧದಿಂದಾಗಿ ಜನರು ಇರುತ್ತಾರಲ್ಲಾ ಅವರಿಗೆ ಕಾಲೇಜು ಇದೆ, ಸ್ಕೂಲ್ ಇದೆ, ಪ್ರಯೋಜನ ಅದರ ಕಡೆಗೆ ಗಮನ ಇರುವುದಿಲ್ಲ. ಯಾರೋ ಒಬ್ಬರು ಮಧ್ಯೆ ಇರತಕ್ಕವರು ಹೋಗಿ ಒಬ್ಬರಿಗೆ ಹಂಚಿಕೊಟ್ಟರೆ ಅವರು ನಮ್ಮ ಬೆನ್ನ ಹಿಂದೆ ಬೀಳುತ್ತಾರೆ. ಮತ್ತೆ ನಮಗೆ ನಮ್ಮದೇ ಆದ ನಿರ್ಬಂಧ ಇರುತ್ತದೆ.

ಡಾ|| ಎಂ. ಪಿ. ಕರ್ಕಿ : ನಾನು ಅದಕ್ಕಾಗಿಯೇ ಖಂಡಿತವಾಗಿ ಹೇಳಿದೆ.

ಅಧ್ಯಕ್ಷರು : ಇದು ಸದನದಲ್ಲಿ ನಡೆದಂತಹ ಘಟನೆ.

ಡಾ|| ಎಂ.ಪಿ. ಕರ್ಕಿ : ಈ ಒಂದು ವಿಚಾರದಲ್ಲಿ ಯಾವುದೇ ಒಂದು ರಾಜಕೀಯ ಹಸ್ತಕ್ಷೇಪ ಅಥವಾ ಒತ್ತಡಕ್ಕೆ ಮಣಿಯಬಾರದು ಎಂದು ಹೇಳತಕ್ಕ ಮಾತನ್ನು ನಾನು ಹೇಳಿದೆ. ಮಾನ್ಯ ಗೋವಿಂದೇಗೌಡರು ಏತಕ್ಕೆ ಮಾಡುತ್ತಿಲ್ಲವೋ ನನಗೆ ಗೊತ್ತಿಲ್ಲ, ಏಕೆ ಹಿಂಜರಿಯುತ್ತಿದ್ದಾರೆ ನನಗೆ ಗೊತ್ತಿಲ್ಲ. ಅದನ್ನು ಮಾಡತಕ್ಕ ಸಾಮರ್ಥ್ಯ ಕೂಡ ಅವರಲ್ಲಿದೆ ಎಂದು ನಾನು ಅಂದುಕೊಂಡಿದ್ದೇನೆ. ಇಲ್ಲಿ ಅವರು ಎಡವಿದ್ದಾರೆ. ಪ್ರಯತ್ನ ಮಾಡಿದರೆ ಆಗುತ್ತದೆ. ಏಕೆ ಮಾಡುವುದಿಲ್ಲ? ಮಾಡಬೇಕಾಗುತ್ತದೆ, ಮುಂದೆ ಮಾಡುತ್ತಾರೆಂದು ನಾನು ಆಸೆ ಇಟ್ಟುಕೊಂಡಿದ್ದೇನೆ.

ಇನ್ನು ಪದವಿ ಶಿಕ್ಷಣದ ವಿಚಾರ, ಇವತ್ತಿನ ದಿವಸದಲ್ಲಿ ಒಂದು ಹೊಸದಾಗಿರತಕ್ಕ ಆಕ್ಟ್‌ಗಳನ್ನು ಕರ್ನಾಟಕ ಯಾನಿವರ್ಸಿಟಿ ಆಕ್ಟ್ ಎಂದು ಹೇಳಿ ಬಹುತೇಕ ಸುರೇಂದ್ರನಾಥ್ ಕಮಿಟಿಯ ಆಧಾರದ ಮೇಲೆ ಸರ್ಕಾರದವರು ಜನತೆಯ ಮೇಲೆ ಹೇರಲಿಕ್ಕೆ ಇಚ್ಛಿಪಡುತ್ತಾರೆಂಬ ಮಾತನ್ನು ನಾನು ಕೇಳಿದೆ. ಇದರಲ್ಲಿ ಯೂನಿವರ್ಸಿಟಿ ಆಟೋನಾಮಸ್ ಬಾಡಿ. ಅವರಿಗೇ ತಮ್ಮದೇ ಆದಂತಹ ಸ್ವಾಯತ್ತತೆ, ಸ್ವಾತಂತ್ರ್ಯ ಇರಬೇಕಾದ್ದು ಅವಶ್ಯಕತೆ. ಈ ಅವಶ್ಯಕತೆಗೆ ವಿರುದ್ಧವಾಗಿ ಯಾವುದೇ ವಿಚಾರಗಳನ್ನು ಯೂನಿವರ್ಸಿಟಿಯವರು ಹೇಳತಕ್ಕದ್ದು, ಸಿಂಡಿಕೇಟ್ ಚುನಾವಣೆಗಳಲ್ಲಿ ಅಧಿಕಾರಿಗಳು ಹೋಗತಕ್ಕದ್ದು. ಸರ್ಕಾರ ರಿಮೋಟ್ ಕಂಟ್ರೋಲ್ ಮಾಡತಕ್ಕದ್ದು. ಇದರ ಅವಶ್ಯಕತೆ ಸರ್ಕಾರಕ್ಕೆ ಇದೆಯೇ? ನಮ್ಮ ರಾಷ್ಟ್ರೀಯ ನೀತಿಯಲ್ಲಿ ಆಟೋನಾಮಸ್ ಕಾಲೇಜ್ ಮಾಡತಕ್ಕ ರೀತಿ ಇದೆ. ಆಟೋನಾಮಸ್ ಕಾಲೇಜುಗಳು, ಯೂನಿವರ್ಸಿಟಿ ಅಲ್ಲ. ಅವರೇ ಶಿಕ್ಷಕರನ್ನು ನೇಮಿಸತಕ್ಕದ್ದು, ಅವರೇ ಪಾಠ-ಪ್ರವಚನ, ಸಿಲಬಸ್ ಮಾಡತಕ್ಕದ್ದು, ಅವರೇ ಪರೀಕ್ಷೆ ಮಾಡತಕ್ಕದ್ದು, ಅವರೇ ಡಿಗ್ರಿ ಕೊಡತಕ್ಕದ್ದು. ಆ ಒಂದು ಬೃಹತ್ ಯೋಜನೆಯೊಳಗಡೆ ನಾವು ಇಷ್ಟು ಕುಬ್ಜರಾಗಿ ಈ ನಮ್ಮ ಸರ್ಕಾರ ಯೂನಿವರ್ಸಿಟಿಗಳ ಹಿಡಿತ ತೆಗೆದುಕೊಳ್ಳುವ ಸಲುವಾಗಿ ಈ ಒಂದು ಕರಾಳವಾಗಿರತಕ್ಕ ಆಕ್ಟ್‌ನ್ನು ಏಕೆ ತರುತ್ತದೆ ಎನ್ನತಕ್ಕ ಸಂಶಯ ನನಗೆ ಬರುತ್ತಿದೆ. ಇನ್ನು ಅರೆಕಾಲಿಕ ಉಪನ್ಯಾಸಕರ ವಿಚಾರ. ಈ ಅರೆಕಾಲಿಕ ಉಪನ್ಯಾಸಕರು ಮೊದಲು ಗುತ್ತಿಗೆ ಆಧಾರದ ಮೇಲೆ ಸ್ಟಾಪ್ ಗ್ಯಾಪ್ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಇವರಿಗೆ ಸುಪ್ರೀಂ ಕೋರ್ಟಿನ ತೀರ್ಪು ಬಂತು. ಒಂದು ಅವಧಿಯೊಳಗೆ ಎರಡು ವರ್ಷ ಸೇವೆ ಮಾಡಿದವರಿಗೆ ಖಾಯಂ ಮಾಡಬೇಕು ಎಂಬ ಆಜ್ಞೆ ಆಯಿತು. ಕೆಲವು ಶಿಕ್ಷಕರು ಹಾಗೆಯೇ ಉಳಿದುಕೊಂಡರು. ಗುರುಮೂರ್ತಿ ಕಮೀಷನ್ ಅನ್ನು ಸರ್ಕಾರ ನೇಮಿಸಿತು. ಗುರು ಮೂರ್ತಿ ಕಮೀಷನ್ ರಿಪೋರ್ಟ್ ಕೊಟ್ಟಿತು 14 ಶಿಕ್ಷಕರನ್ನು ಖಾಯಂ ಮಾಡಬೇಕೆಂದು ವರದಿ ಕೊಟ್ಟಿತು. ಆ ಖಾಯಂ ಆಜ್ಞೆ ಆಗಲಿಲ್ಲ. ಬರೀ 10 ಜನರಿಗೆ ಮಾತ್ರ ಆಯಿತು. ಯಾರು ದುಡ್ಡು ಕೊಟ್ಟಿದ್ದಾರೋ ಅವರಿಗೆ ಖಾಯಂ ಆಯಿತು. ನಾನು ಬಹಳ ವ್ಯಥೆಯಿಂದ ಹೇಳಬೇಕಾಗುತ್ತದೆ. ಯಾರು ಸಂದಾಯ ಮಾಡಿದರು ಅವರಿಗೆ ಮಾತ್ರ ಖಾಯಂ ಸಾಧ್ಯ ಆಯಿತು. ಈ ನಾಲ್ಕು ಜನ ಶಿಕ್ಷಕರು ಹಣ ಕೊಡಲಿಲ್ಲ ಎಂದು ಹಾಗೆಯೇ ಇದ್ದಾರೆ. ಈ ನಾಲ್ಕು ಜನ ಶಿಕ್ಷಕರು ಖಾಯಂ ಆಗಲಿಲ್ಲ. ಅವರುಗಳು ಖಾಯಂ ಆಗುವುದು ಯಾವಾಗ? ಈ ಶಿಕ್ಷಕರಿಗೂ ಪಗಾರ ಕೊಡಬೇಕು. ಖಾಯಂ ಪಗಾರ ಕೊಡಬೇಕೆಂದು

ಹೇಳಿ ಜನವರಿಯಲ್ಲಿ ನಿಶ್ಚಯ ಆಯಿತು. ಇಲ್ಲಿಯತನಕ ಪಗಾರ ಸಿಕ್ಕಿಲ್ಲ. ಸರ್ಕಾರ ಪದೇ ಪದೇ ಈ ರೀತಿಯಾಗಿ ಏಕೆ ಎಡವುತ್ತಿದೆ ಎನ್ನುವ ಒಂದು ಪ್ರಶ್ನೆ ನಾನು ಕೇಳಲು ಇಚ್ಛಿಪಡುತ್ತೇನೆ. ಯಾವಾಗ ತೀರ್ಮಾನ ಆಯಿತು, ಆ ತೀರ್ಮಾನವನ್ನು ಅನುಷ್ಠಾನ ಮಾಡಲು ಏನು ತೊಂದರೆ? ಏಕೆ ಅನುಷ್ಠಾನ ಮಾಡುವುದಿಲ್ಲ? ಏತಕ್ಕಾಗಿ ಮಾಡುವುದಿಲ್ಲ? ಸರ್ಕಾರದಲ್ಲಿ ತಮ್ಮ ಹಣಕಾಸಿಗೆ ಅನುಗುಣವಾಗಿ ನೀತಿಯನ್ನು ರೂಪಿಸಬೇಕು. ವಿದ್ಯಾರ್ಥಿಗಳ ಅಥವಾ ವಿದ್ಯಾಭ್ಯಾಸದ ಚಿಂತನೆಯಿಂದ ನಮಗೆ ಎಷ್ಟು ಹಣಕಾಸು ಇದೆ, ಅದರಲ್ಲಿ ಯಾವ ರೀತಿ ಮಾಡಬಹುದು ಎಂದು ಆ ರೀತಿ ನೀತಿ ನಿರೂಪಣೆ ಆಗಬೇಕು. ಒಂದು ಸಮಯದಲ್ಲಿ ಎಲ್ಲಾ ವಿಶ್ವವಿದ್ಯಾನಿಲಯದಲ್ಲಿ ಡಿಗ್ರಿ ಕ್ಲಾಸ್ ಎರಡು ಸರಿಸಮಾನವಾದ ವಿಷಯ ಇತ್ತು. ಅದು ಮೂರು ಸರಿ ಸಮಾನವಾದ ವಿಷಯ ಆಯಿತು. ಆ ಮೂರು ಸರಿಸಮಾನವಾದ ವಿಷಯಗಳು ಆದ ನಂತರ ವರ್ಕ್‌ಲೋಡ್ ಜಾಸ್ತಿ ಆಯಿತು. ಹೆಚ್ಚಿನ ವಿಷಯಕ್ಕೆ ನೇಮಕಕ್ಕೆ ಅನುಕೂಲ ಆಯಿತು. ಆ ನಂತರ ಮಾರನೇ ವರ್ಷ ಇವರನ್ನು ತೆಗೆದುಕೊಳ್ಳಬಾರದು ಎಂದು ನಿರ್ಧಾರ ಆಯಿತು ಶಿಕ್ಷಣದ ಸಲುವಾಗಿ ಇವತ್ತು ವರ್ಕ್‌ಲೋಡ್ ಇದ್ದರೆ ತೆಗೆದುಕೊಳ್ಳಬೇಕು ಎಂದು ಹೇಳಿ ಅವರನ್ನು ಮುಂದಿನ ವರ್ಷ ತೆಗೆದು ಹಾಕಬೇಕು ಎಂದು ಹೇಳುವುದು. ಎಲ್ಲಿ ನಿವೃತ್ತಿ ಆಗಿರುತ್ತಾರೆ, ಎಲ್ಲಿ ಸತ್ತಿದ್ದಾರೆ, ಎಲ್ಲಿ ಶಿಕ್ಷಕರು ಬಿಟ್ಟು ಹೋಗಿದ್ದಾರೆ, ಅಲ್ಲಿಗೆ ಮಾತ್ರ ತೆಗೆದುಕೊಳ್ಳಬೇಕು. ಸರ್ಕಾರದ ಮೊದಲನೇ ವರ್ಷ ನಿರ್ಧಾರ ಎರಡನೇ ವರ್ಷದ ನಿರ್ಧಾರಕ್ಕೆ ತಾಳ ಮೇಳ ಇಲ್ಲ. Absolutely there is no relationship. ಕಂಟಿನ್ಯೂಟಿ ಇಲ್ಲ. ಏಕೆ ಹೀಗೆ ಆಗುತ್ತದೆ? ಶಿಕ್ಷಣದಲ್ಲಿ ಗೊಂದಲ ಉದ್ಭವ ಆಗುತ್ತದೆ. ವಿದ್ಯಾರ್ಥಿಗಳಿಗೆ ಸರಿಯಾದ ಶಿಕ್ಷಣ ಸಿಗುವುದಿಲ್ಲ. ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡಬೇಕು, ಅವರು ಒಳ್ಳೆಯವರಾಗಬೇಕು ಎಂಬ ಉದ್ದೇಶ ನಮ್ಮದು ನಮ್ಮ ಹಣಕಾಸು ಎಷ್ಟು ಇದೆ? ಅದಕ್ಕೆ ತಕ್ಕಂತೆ ನಾವು ನಮ್ಮ ನೀತಿ ಮಾರ್ಪಾಟು ಮಾಡಿಕೊಳ್ಳದೇ ಹೋದರೆ ಸಾಧುವಲ್ಲ ಎಂದು ಹೇಳತಕ್ಕ ವಿಷಯವನ್ನು ಕೂಡ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ಜನರಲ್ ಡಿಗ್ರಿಗಳ ಬಗ್ಗೆ ನೀವು ಏನೂ ಹೇಳುವುದಿಲ್ಲವೇ? ಬಿಎ, ಬಿಎಸಸಿ ಬಿಕಾಂ ಡಿಗ್ರಿಗಳ ಬಗ್ಗೆ, ಏನೋ ಕೆಲಸಕ್ಕೆ ಬಾರದೇ ಇರುವ ಡಿಗ್ರಿಗಳು, ಇವು ಇರಬೇಕೇ ಬೇಡವೇ? ಅವು ಇದ್ದರೆ ಹೇಗೆ, ಇರಬೇಕು, ಅವುಗಳ ಬಗ್ಗೆ ಹೇಳುವುದಿಲ್ಲವೇ?

ಡಾ|| ಎಂ.ಪಿ. ಕರ್ಕಿ : ತಾವು ಸೂಕ್ತವಾದ ಮಾರ್ಗದರ್ಶನವನ್ನು ನೀಡಿದ್ದೀರಿ. ಸಾವಕಾಶವಾಗಿ 50 ವರ್ಷಗಳ ಆದ ನಂತರವಾದರೂ....

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲಿ ಪ್ರಶ್ನೆ, ಅದು ಬಿ ಎಸ್‌ಸಿ/ಬಿ.ಎ. ಇರಲಿ ಬೇರೆ ಯಾವುದೇ ಡಿಗ್ರಿ ಇರಲಿ. ಈ ಶಿಕ್ಷಣ ನಾವು ನಮ್ಮ ಮಕ್ಕಳಿಗೆ ಕೊಡುವಂತಹದು ಮುಂದೆ ಒಂದು ಸರ್ಕಾರಿ ಉದ್ಯೋಗಕ್ಕೆ ಎನ್ನುವಂತಹದು ಭಾವನೆ ಏನು ಇದೆ ಅದನ್ನು ಮೊದಲು ತೆಗೆದು ಹಾಕಬೇಕು; ತಮ್ಮ ಕಾಲ ಮೇಲೆ ತಾವು ನಿಂತು ಗೌರವದಿಂದ ಜೀವನ ನಡೆಸುವುದಕ್ಕೆ ಇರುವುದು ಈ ಶಿಕ್ಷಣ. ಈ ಒಂದು ಕರ್ತವ್ಯ ಪ್ರಜ್ಞೆಗೆ, ಹಾಗೂ ಈ ಜ್ಞಾನೋದಯವನ್ನು ಶಿಕ್ಷಣ ಕೊಡುವಂತಹ ಕಾಲದಲ್ಲಿ ಕೊಡದೇ ಇದ್ದರೆ, ಏನು ಆಗಿದೆ ಇವತ್ತು? ಡಿಗ್ರಿ ಪಡೆದು ಈ ಸರ್ಕಾರಕ್ಕೆ ಒಂದು ಹೊರೆ. ಸಮಾಜಕ್ಕೆ ಒಂದು

ಕೊರೆ. ಹೊಲ ಉಳುವುದಿಲ್ಲ, ಇಲ್ಲಿ ನೌಕರಿ ಸಿಗುವುದಿಲ್ಲ. ಹಳ್ಳಿ ಬೇಡ, ನಗರಕ್ಕೆ ಬಂದು ರಸ್ತೆ ತಿರುಗಾಡುವುದು. ಇದನ್ನು ಏನಾದರೂ ತಪ್ಪಿಸುವುದಕ್ಕೆ ಸಾಧ್ಯವೇ? ದಯಮಾಡಿ ನಾವು ಎಲ್ಲಾ ಇಲ್ಲಿ ಯೋಚನೆ ಮಾಡಬೇಕು. ಒಟ್ಟಿಗೆ ಚಿಂತನೆ ಮಾಡುವಂತಹದು. ಈಗ ಯಾವ ಡಿಗ್ರಿಗೆ ಬೆಲೆ ಇದೆ?

ಡಾ|| ಎಂ. ಪಿ. ಕರ್ಕಿ : ನ್ಯಾಶನಲ್ ಪಾಲಿಸಿ ಆನ್ ಎಜುಕೇಷನ್‌ನಲ್ಲಿ ಹೇಳುತ್ತಾರೆ ಮಾನ್ಯ ಯುಡಿಯೂರಪ್ಪನವರು ಹೇಳತಕ್ಕದ್ದು. Delinking of degrees.

ಅಧ್ಯಕ್ಷರು : ದಕ್ಷಿಣ ಕನ್ನಡ ಜಿಲ್ಲೆಯ ಮಿನಿ ಅಸೆಂಬ್ಲಿ ನಡೆಯುತ್ತಿದೆ. ನೀವು ಮಾತನಾಡಿ ನೀವು ಉತ್ತರ ಕನ್ನಡ ಜಿಲ್ಲೆಯವರು.

ಡಾ|| ಎಂ. ಪಿ. ಕರ್ಕಿ : ಅವರಿಗೆ ಬಹಳ ಮಹತ್ವದ ವಿಷಯ ಚರ್ಚೆ ಮಾಡುವುದಕ್ಕೆ ಇದೆ. ಹಾಗಾಗಿ ಮಾತನಾಡುತ್ತಿದ್ದಾರೆ.

